


# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

# Karnataka Scout & Guide

Monthly Magazine

| | | | | |
|---|---|---|---|---|
| Vol -65 | Issue-05 | MAY 2024 | Pages: 24 | Annual Subscription: ₹ 100/- |
| ಸಂಪುಟ: 65 | ಸಂಚಿಕೆ: 05 | ಮೇ 2024 | ಪುಟಗಳು: 24 | ವಾರ್ಷಿಕ ಚಂದ ರೂ. 100/- |


## ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ 2024ರ ಲೋಕಸಭಾ ಚುನಾವಣೆ ಮತಗಟ್ಟೆಗಳಲ್ಲಿ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಸೇವೆ ಸಲ್ಲಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಅತ್ತಾವರ 55ನೇ ವಾರ್ಡಿನ 2024ರ ಲೋಕಸಭಾ ಚುನಾವಣೆ ಮತದಾನ ಕೇಂದ್ರದಲ್ಲಿ ಕೆನರಾ ಸಿ.ಬಿ.ಎಸ್.ಇ ಶಾಲೆಯ ಗೈಡ್ಸ್‌ಗಳಾದ ಕುಮಾರಿ ಆದ್ಯಲಕ್ಷ್ಮಿ ಮತ್ತು ಕುಮಾರಿ ಯಾದವಿ ಇವರುಗಳು ಸೇವೆಯನ್ನು ಸಲ್ಲಿಸುತ್ತಿರುವ ಸಂದರ್ಭದಲ್ಲಿ ಶ್ರೀ ಹೆಚ್. ಫಕ್ರುದ್ದೀನ್, ಫೋಟೋಗ್ರಾಫರ್, ಮಂಗಳೂರು ಇವರು ತೆಗೆದಿರುವ ಫೋಟೋ ರಾಜ್ಯ ಮಟ್ಟದ ಛಾಯಾಚಿತ್ರ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದೆ. ಇವರಿಗೆ ರಾಜ್ಯ ಸಂಸ್ಥೆಯಿಂದ ಅಭಿನಂದನೆಗಳು.



STATE LEVEL CONTEST WINNER PHOTOGRAPHY

# 2024ರ ಲೋಕಸಭೆಯ ಚುನಾವಣೆ ಮತಗಟ್ಟೆಗಳಲ್ಲಿ ವಿವಿಧ ಜಿಲ್ಲೆಗಳ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಸೇವೆ ಸಲ್ಲಿಸಿದ ಚಿತ್ರಗಳ ವಿವರಗಳು


ಬೆಂಗಳೂರು ಉತ್ತರ


ಬೆಳಗಾವಿ


ಬೆಂಗಳೂರು ಪೂರ್ವ


ಬಳ್ಳಾರಿ


ಗದಗ


ಹಾವೇರಿ


ಹಾಸನ


ರಾಯಚೂರು


ತುಮಕೂರು


ವಿಜಯಪುರ


ಬೆಂಗಳೂರು ದಕ್ಷಿಣ

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್



ಸಂಚಿಕೆಯ ವಾರ್ಷಿಕ ಚಂದಾ ರೂ. 100/–
ವಿದ್ಯಾಸಂಸ್ಥೆ ಹಾಗೂ ಸಂಘ–ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/–

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು – 560 001
ಇಲ್ಲಿಗೆ ಕಳುಹಿಸಲು ಕೋರಿದೆ.


# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide

MONTHLY NEWS MAGAZINE


Vol: 65 Issue : 05 MAY 2024


## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...04

ಸಂಪಾದಕೀಯ ...05

2023–24ನೇ ಸಾಲಿನ ದ್ವಿತೀಯ ಪಿ.ಯು.ಸಿಯಲ್ಲಿ ಸಾಧನೆ ಮಾಡಿದ ಸ್ಕೌಟ್ಸ್–ಗೈಡ್ಸ್‌ಗಳು ...06

ಅಭಿನಂದನಾ ಸಮಾರಂಭ ...07

ರಾಜ್ಯ ಕಾರ್ಯಕಾರಿ ಸಮಿತಿ ಸಭೆ ...07

Menstrual Hygiene Day Celebration ...08

ಮೈಸೂರು ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಕ್ರೀಡಾಕೂಟದ ಸಮಾರೋಪ ಸಮಾರಂಭ ...08

2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿಯಲ್ಲಿ ಸಾಧನೆ ಮಾಡಿದ ಸ್ಕೌಟ್ಸ್–ಗೈಡ್ಸ್‌ಗಳು ...09

ಜೂನ್ 2024ರ ಕಾರ್ಯಕ್ರಮಗಳು ...11

ಜಿಲ್ಲಾ ವಾರ್ತೆಗಳು ...12

ಶ್ರದ್ಧಾಂಜಲಿ ...20


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್–ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

ಸಮಸ್ತ ಸ್ಕೌಟ್ಸ್–ಗೈಡ್ಸ್ ಬಾಂಧವರಿಗೆ ಶುಭಾಶಯಗಳು.

ರಾಜ್ಯಾದ್ಯಂತ ಎಲ್ಲ ಖಾಸಗಿ ಮತ್ತು ಸರ್ಕಾರಿ ಶಾಲೆಗಳ ಬೇಸಿಗೆರಜೆ ಮುಗಿದು ಹೊಸ ಶೈಕ್ಷಣಿಕ ವರ್ಷ ಆರಂಭಿಸಲು ಸಜ್ಜಾಗಿವೆ. ಈ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳ ಪದಾಧಿಕಾರಿಗಳು, ಸಂಘಟಕರುಗಳು ಸಾಧ್ಯವಾದಷ್ಟು ಶಾಲೆಗಳಿಗೆ ಭೇಟಿ ನೀಡಿ, ಹೊಸ ಶೈಕ್ಷಣಿಕ ವರ್ಷಕ್ಕೆ ಮಕ್ಕಳನ್ನು ಸ್ವಾಗತಿಸುವ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದು ಸೂಕ್ತವೆಂಬುದು ನನ್ನ ಸೂಚನೆ. ಪ್ರಾಥಮಿಕ ಹಂತದಲ್ಲಿಯೇ ನಮ್ಮ ಚಳವಳಿಯ ವಿಸ್ತಾರ, ದೃಢತೆ ಮತ್ತು ತರಬೇತಿಗಳ ಗುಣಮಟ್ಟ ಸುಧಾರಣೆಗೆ ಗಮನಹರಿಸುವ ಅಗತ್ಯವಿದ್ದು, ಈ ಬಗ್ಗೆ ನಾವೆಲ್ಲರೂ ಕಾರ್ಯತತ್ಪರರಾಗೋಣ ಎಂದು ಕೋರುತ್ತೇನೆ.

ರಾಜ್ಯದ ಎಲ್ಲಾ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳ, ಸಂಘಟಕರುಗಳ ಹಾಗೂ ಶಿಕ್ಷಕರುಗಳ ಆಸಕ್ತಿಯಿಂದ ಈ ಸಾಲಿನ ಬೇಸಿಗೆ ಶಿಬಿರಗಳು ಅತ್ಯಂತ ಯಶಸ್ವಿಯಾಗಿ ನಡೆದಿವೆ. 1.20 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಕಬ್ಸ್–ಬುಲ್‌ಬುಲ್ಸ್‌ಗಳು, ಸ್ಕೌಟ್ಸ್–ಗೈಡ್ಸ್‌ಗಳು ಈ ಶಿಬಿರಗಳಲ್ಲಿ ಭಾಗವಹಿಸಿರುವುದು ಹೆಮ್ಮೆಯ ವಿಚಾರ. ಈ ಕಾರ್ಯಕ್ರಮದ ಯಶಸ್ಸಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರಿಗೂ ನನ್ನ ಕೃತಜ್ಞತೆಗಳು.

ರಾಜ್ಯ ಸಂಸ್ಥೆಯ ವತಿಯಿಂದ 2024–25ನೇ ಸಾಲಿನ ಕಾರ್ಯಕ್ರಮಗಳು, ಚಟುವಟಿಕೆಗಳು ಮತ್ತು ತರಬೇತಿಗಳ ಬಗ್ಗೆ ರೂಪುರೇಷೆಗಳ ಸಿದ್ಧತೆಗಳಲ್ಲಿ ತೊಡಗಿದ್ದೇವೆ. ಈ ಪ್ರಕ್ರಿಯೆಗಳಲ್ಲಿ ರಾಜ್ಯ ಸಂಸ್ಥೆಯ ಎಲ್ಲ ಪದಾಧಿಕಾರಿಗಳು, ಕಾರ್ಯಕರ್ತರುಗಳು ಮತ್ತು ಸಿಬ್ಬಂದಿಗಳು ತೋರುತ್ತಿರುವ ಆಸಕ್ತಿ ಮತ್ತು ಬದ್ಧತೆಗೆ ನಾನು ಚಿರಋಣಿ. ಮೇ ತಿಂಗಳಿನಲ್ಲಿ ನಡೆದ ಹಲವಾರು ಸಮಿತಿಗಳ ಸಭೆಗಳಲ್ಲಿ ಉತ್ತಮವಾದ ಸಲಹೆಗಳು ಬಂದಿವೆ. ಶಿಕ್ಷಣ ಇಲಾಖೆಯ ಅಧಿಕಾರಿಗಳಿಂದಲೂ ಪೂರಕ ಸ್ಪಂದನೆ ಸಿಗುತ್ತಿದೆ. ಕಳೆದ ಸಾಲಿನ ಗಣತಿಯಲ್ಲಿ ಸಾರ್ವಕಾಲಿಕ ದಾಖಲೆ ಮಾಡಿರುವ ನಮ್ಮ ಸಂಸ್ಥೆ, 2024–25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ಚಟುವಟಿಕೆಗಳು ಮತ್ತಷ್ಟು ಯಶಸ್ಸನ್ನು ಕಾಣುವ ಆಶಾಭಾವನೆ ನನ್ನಲ್ಲಿ ಮೂಡಿದೆ.

ಎಲ್ಲಡೆ ತಂತ್ರಜ್ಞಾನ ಅಳವಡಿಸಿಕೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ, ನಮ್ಮ ಸಂಸ್ಥೆಯಲ್ಲಿಯೂ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ, ಪ್ರತಿಷ್ಠಿತ ಜೈನ್ ವಿಶ್ವವಿದ್ಯಾಲಯದ ಜಂಟಿ ರಿಜಿಸ್ಟ್ರಾರ್ ಮತ್ತು ರಾಜ್ಯ ಸಂಸ್ಥೆಯ ಸ್ಥಾನಿಕ ಆಯುಕ್ತರಾಗಿರುವ ಶ್ರೀ ಎಂ.ಎಸ್. ಸಂತೋಷ್‌ರವರು ಜಿಲ್ಲಾ ಸಂಸ್ಥೆಗಳಿಗೆ ಅಗತ್ಯವಿರುವ ಕಂಪ್ಯೂಟರ್‌ಗಳನ್ನು ಒದಗಿಸುವುದರೊಂದಿಗೆ ಕಾಲಕಾಲಕ್ಕೆ ನಮ್ಮ ಸಿಬ್ಬಂದಿಗೆ ತಂತ್ರಜ್ಞಾನ ಅಳವಡಿಕೆಯ ಬಗ್ಗೆ ತರಬೇತಿ ನೀಡಲು ಉತ್ಸುಕರಾಗಿದ್ದಾರೆ. ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಅವರ ಆಸಕ್ತಿಯಿಂದಾಗಿ ರಾಜ್ಯದ ಸ್ಕೌಟ್ಸ್–ಗೈಡ್ಸ್‌ಗೆ ಸಂಬಂಧಿಸಿದ ಹಲವಾರು ಸಾಹಿತ್ಯಗಳು, ಪುಸ್ತಕಗಳು, ಮಾಸ ಪತ್ರಿಕೆಗಳು ಈಗಾಗಲೇ ಡಿಜಿಟಲೀಕರಣಗೊಂಡಿವೆ. ಸ್ಕೌಟ್ಸ್–ಗೈಡ್ಸ್ ಚಳವಳಿಯಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬರೂ ಇದರ ಸದುಪಯೋಗಪಡಿಸಿಕೊಳ್ಳಬೇಕೆಂಬ ಕಳಕಳಿಯ ಮನವಿ ನನ್ನದು. ಈ ಸಂಚಿಕೆಯಲ್ಲಿ ಆ ಬಗ್ಗೆ ಹೆಚ್ಚಿನ ವಿವರಗಳನ್ನು ಪ್ರಕಟಿಸಲಾಗಿದೆ.

ಜೂನ್ ತಿಂಗಳು ಅನೇಕ ಮೌಲ್ಯಯುತ ಆಚರಣೆಗಳಿಗೆ ಸಾಕ್ಷಿಯಾಗಲಿದೆ. ಜೂನ್ 5–ವಿಶ್ವಪರಿಸರದಿನ. ಇಂದಿನ ದಿನಮಾನಗಳಲ್ಲಿ ಪರಿಸರ ಸಂರಕ್ಷಣೆ ಒಂದು ಪ್ರಮುಖ ವಿಷಯವಾಗಿದ್ದು, ಇದು ಜನರ ಯೋಗಕ್ಷೇಮದ ಮೇಲೆ ಪರಿಣಾಮ ಬೀರುವುದು ಮಾತ್ರವಲ್ಲದೆ, ಪ್ರಪಂಚದಾದ್ಯಂತ ಆರ್ಥಿಕ, ಸಾಮಾಜಿಕ, ವೈಜ್ಞಾನಿಕ ಅಭಿವೃದ್ಧಿಯನ್ನು ಅಡ್ಡಿಪಡಿಸುತ್ತದೆ. ಆದುದರಿಂದ ಪರಿಣಾಮಕಾರಿ ಪರಿಸರ ವ್ಯವಸ್ಥೆಯ ಪುನರ್‌ಸ್ಥಾಪನೆಗಾಗಿ ನಾವೆಲ್ಲರೂ ಕೈಜೋಡಿಸೋಣ.

ಜೂನ್ 7– ವಿಶ್ವ ಆಹಾರ ಸುರಕ್ಷತಾ ದಿನ. ಈ ದಿನವು ಆಹಾರದ ಸದ್ಬಳಕೆ ಮತ್ತು ಕೊರತೆ ಎದುರಿಸಬೇಕಾದ ಅಪಾಯವನ್ನು ಕಡಿಮೆ ಮಾಡುವ ಮಾರ್ಗಗಳನ್ನು ಕೇಂದ್ರೀಕರಿಸುತ್ತದೆ. ಯಾವುದೇ ಒಂದು ರಾಷ್ಟ್ರ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಆಹಾರದ ಸುರಕ್ಷತೆಯು ಪ್ರಮುಖ ಅಂಶವಾಗಿರುತ್ತದೆ.

ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಯೋಗದ ಅವಶ್ಯಕತೆ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಯೋಗದ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸಲು ಜೂನ್ 21 ಅನ್ನು "ಅಂತರಾಷ್ಟ್ರೀಯ ಯೋಗ ದಿನವನ್ನಾಗಿ" ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಆಯುಷ್ ಇಲಾಖೆಯು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸಹಕಾರವನ್ನು ಬಯಸಿದ್ದು, ರಾಜ್ಯಾದ್ಯಂತ ನಮ್ಮ ಸಂಸ್ಥೆಯವತಿಯಿಂದ ಅಂತಾರಾಷ್ಟ್ರೀಯ ಯೋಗದಿನವನ್ನು ಯಶಸ್ವಿಯಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸೋಣ.

ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದರೂ ಹಾಗೂ ಮಾಜಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಚಿವರಾಗಿದ್ದ ಶ್ರೀ ವಿ.ಶ್ರೀನಿವಾಸ ಪ್ರಸಾದ್ ಅವರು ಇತ್ತೀಚೆಗೆ ನಿಧನ ಹೊಂದಿದ್ದಾರೆ. ಸ್ವಾಭಿಮಾನಿ ರಾಜಕಾರಣಿ ಎಂದೇ ಹೆಸರಾಗಿದ್ದ ಅವರು ರಾಜ್ಯದ ಒಬ್ಬ ಪ್ರಭಾವಿ ಮುಖಂಡರಾಗಿದ್ದರು. ಚಾಮರಾಜನಗರ ಜಿಲ್ಲೆಯ ಉತ್ತಮ ಸ್ಕೌಟ್ ಮಾಸ್ಟರ್ ಹಾಗೂ ನಾಯಕ ತರಬೇತುದಾರರಾಗಿ, ಜಿಲ್ಲಾ ಸ್ಕೌಟ್ಸ್ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿ, ಚಳುವಳಿಯ ಬೆಳವಣಿಗೆಗೆ ಅಮೂಲ್ಯ ಕೊಡುಗೆ ನೀಡಿರುವ ಶ್ರೀ ಶರಾಫ್ ಮಾದಪ್ಪ ಅವರು ಇತ್ತೀಚೆಗೆ ನಮ್ಮನ್ನಗಲಿದ್ದಾರೆ.

ರಾಜ್ಯದಲ್ಲಿ ಸ್ಕೌಟ್ಸ್ ಗೈಡ್ಸ್ ಚಳುವಳಿಯ ಬೆಳವಣಿಗೆಗೆ ಹಲವು ದಶಕಗಳಿಂದ ಶ್ರಮಿಸಿದ ಹಿರಿಯ ನಾಯಕರಾದ ಶ್ರೀ ಟಿ.ಎಸ್.ಲೂಕಾಸ್ ಅವರ ಪತ್ನಿ ಶ್ರೀಮತಿ ಇವಾ ಲೂಕಾಸ್ ಅವರು ನಮ್ಮನ್ನಗಲಿದ್ದಾರೆ. ಶ್ರೀ ಟಿ.ಎಸ್. ಲೂಕಾಸ್ ಅವರ ಸಾಧನೆಗೆ ಶ್ರೀಮತಿ ಇವಾ ಲೂಕಾಸ್ ಅವರು ಪ್ರೇರಕ ಶಕ್ತಿಯಾಗಿದ್ದರು. ಈ ಮೂವರು ಮಹನೀಯರುಗಳ ಅಗಲಿಕೆಗೆ ಸಂತಾಪವನ್ನು ವ್ಯಕ್ತಪಡಿಸುತ್ತಾ, ಅವರ ಆತ್ಮಗಳಿಗೆ ಚಿರಶಾಂತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

# ಸಂಪಾದಕೀಯ



ವಿದ್ಯಾರ್ಥಿಗಳು ತಮ್ಮ ಶ್ರೇಷ್ಠ ಬದುಕನ್ನು ಸಾಧಿಸುವಲ್ಲಿ, ಶಾಂತಿಯುತವಾಗಿ ಜೀವನವನ್ನು ನಿರ್ವಹಿಸುವಲ್ಲಿ ಮತ್ತು ಅವರು ಸಮಾಜದ ಸಂತೋಷದಾಯಕ ನಾಗರೀಕರಾಗಿ ಬಾಳುವಲ್ಲಿ ಪೂರಕ ಮತ್ತು ಪ್ರೇರಕ ಶಕ್ತಿಗಳು ಶಾಲಾ–ಕಾಲೇಜುಗಳ ಶಿಕ್ಷಕ ವೃಂದದವರು ಮತ್ತು ಶಿಕ್ಷಣ ಇಲಾಖೆಗಳ ಇತರ ಎಲ್ಲಾ ಕಾರ್ಯಾನುಷ್ಠಾನ ಅಧಿಕಾರಿಗಳು ಎಂಬುದು ಸ್ಪಷ್ಟ.

ವಿದ್ಯಾರ್ಥಿಗಳಲ್ಲಿ ನಡತೆ (Character), ಆರೋಗ್ಯ (Health), ಪ್ರಾವಿಣ್ಯತೆ (Art & Craft) ಮತ್ತು ಸೇವಾ ಗುಣಗಳನ್ನು (Service) ಮುಖ್ಯ ಆಧಾರಸ್ಥಂಭವನ್ನಾಗಿ ಆಧರಿಸಿ, ಅವರುಗಳಲ್ಲಿ ಜ್ಞಾನ (Knowledge) ಕೌಶಲ್ಯ (Skill) ಮತ್ತು ಮನೋಭಾವನೆಗಳನ್ನು (Attitude), ವೃದ್ಧಿಸುವಲ್ಲಿ ಮೇಲ್ಕಂಡವರೆಲ್ಲರ ಅತ್ಯಮೂಲ್ಯ ಸಲಹೆ, ಸಹಕಾರ ಮತ್ತು ಪ್ರೋತ್ಸಾಹದೊಂದಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಸಂಸ್ಥೆಯ ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಸಂಸ್ಥೆಗಳ ಪ್ರೋತ್ಸಾಹದೊಂದಿಗೆ ಮತ್ತು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರವರ ನೇತೃತ್ವದಲ್ಲಿ ಶ್ರಮಿಸುತ್ತಿರುವುದು ಹರ್ಷದಾಯಕ ವಿಷಯ ಆಗಿದೆ. ಸ್ಕೌಟ್ಸ್–ಗೈಡ್ಸ್ ಚಳವಳಿಯ ಧ್ಯೇಯೋದ್ದೇಶಗಳು, ಕಾರ್ಯಚಟುವಟಿಕೆಗಳು ಶಿಕ್ಷಣದ ಇನ್ನೊಂದು ಮುಖ ಆಗಿದ್ದರೂ ನಿರೀಕ್ಷಿತ ಗಣತಿ ಸಾಧನೆ ಆಗಿಲ್ಲದಿರುವುದರ ಬಗ್ಗೆ ಶಿಕ್ಷಣದ ಗುಣಮಟ್ಟದ ಸಾಧನೆಯನ್ನು ನಿರೀಕ್ಷಿಸುವ ಆಕಾಂಕ್ಷಿಗಳೆಲ್ಲರೂ ಗಮನಹರಿಸುವುದು ಅತ್ಯಗತ್ಯವಾಗಿದೆ.

ಪ್ರತಿ ಶಾಲೆ–ಕಾಲೇಜುಗಳಲ್ಲಿ ಸ್ಕೌಟ್ಸ್–ಗೈಡ್ಸ್ ಘಟಕಗಳನ್ನು ಹೊಂದುವುದು ಕಡ್ಡಾಯ/ ಅಪೇಕ್ಷಣೀಯ ಎಂದಿರುವುದಾದರೂ ಅದರ ಸಕ್ರಿಯ ಅನುಷ್ಠಾನದಲ್ಲಿ ಸಂಬಂಧಪಟ್ಟವರೆಲ್ಲರೂ ಕಾಯಾ, ವಾಚಾ, ಮನಸಾ ಭಾಗೀದಾರರಾಗುವುದು ಅತ್ಯಗತ್ಯವಾಗಿರುವುದನ್ನು ಮನಗಾಣಬಹುದಾಗಿದೆ.

2024–25ನೇ ಸಾಲಿನಲ್ಲಿ ಈ ಬಗ್ಗೆ ಹೆಚ್ಚು ಕಾರ್ಯಪ್ರವೃತ್ತರಾಗುವಲ್ಲಿ ಮೇ 2024 ತಿಂಗಳಾದ್ಯಂತ ಸಂಸ್ಥೆಯ ಸಂಬಂಧಪಟ್ಟ ವಿವಿಧ ಸಮಿತಿಗಳ, ಯುವನಾಯಕರುಗಳೊಂದಿಗೆ, ಸ್ಕೌಟ್ಸ್–ಗೈಡ್ಸ್ ಅಭಿಮಾನಿಗಳೊಂದಿಗೆ ಸಭೆ ಏರ್ಪಡಿಸಿ ಬಹಳಷ್ಟು ನಾವಿನ್ಯತೆಯೊಂದಿಗೆ ತರಬೇತಿ, ಕಾರ್ಯಕ್ರಮಗಳು, ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

ಬಹಳಷ್ಟು ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳು, ತಮ್ಮ ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳು ಸ್ಕೌಟ್ಸ್–ಗೈಡ್ಸ್‌ನಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವಲ್ಲಿ ತಮ್ಮ ಸಂಸ್ಥೆ / ತಮ್ಮ ಸಂಸ್ಥೆಯ ಇತರ ಎಲ್ಲಾ ಶಾಲೆಗಳ ಶಿಕ್ಷಕರಿಗೆ ಅವಶ್ಯಕ ತರಬೇತಿ ನೀಡಿ ಪ್ರೋತ್ಸಾಹಿಸುತ್ತಿರುವುದು ತುಂಬಾ ಹರ್ಷದಾಯಕ. ವಿದ್ಯಾರ್ಥಿಗಳಲ್ಲಿ ಗುಣಮಟ್ಟ ಶಿಕ್ಷಣಕ್ಕೆ ಪ್ರೇರಕವಾಗಿರುವ ಇಂತಹ ಸ್ಕೌಟ್ಸ್–ಗೈಡ್ಸ್ ಪ್ರೋತ್ಸಾಹಕ ಕಾರ್ಯಕ್ರಮಗಳಲ್ಲಿ ಇತರ ಶಿಕ್ಷಣ ಸಂಸ್ಥೆಗಳೂ ಹೆಚ್ಚು–ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಸರ್ಕಾರಿ / ಅನುದಾನಿತ ಶಾಲಾ–ಕಾಲೇಜುಗಳೂ ಭಾಗಿಗಳಾಗಬೇಕಾಗಿ ವಿನಮ್ರವಾಗಿ ವಿನಂತಿಸುತ್ತೇನೆ. ತನ್ಮೂಲಕ ಇಂಥಹ ಸಂಸ್ಥೆಗಳ ಗೌರವ–ಆಧರಗಳು ಹೆಚ್ಚುವುದು ಸ್ಪಷ್ಟ.

ಸ್ಕೌಟ್–ಗೈಡ್ ಮಾಸಪತ್ರಿಕೆಗೆ ಸ್ಕೌಟ್ಸ್–ಗೈಡ್ಸ್ ಚಳವಳಿಯ ಅನುಷ್ಠಾನದಿಂದ ವಿದ್ಯಾರ್ಥಿಗಳಿಗೆ ಆಗುವ ಉಪಯೋಗಗಳ ಬಗ್ಗೆ ತನ್ಮೂಲಕ ಉತ್ತಮ ಜನಾಂಗವನ್ನು ಹೊಂದುವಲ್ಲಿ ಆಗುವ ಪ್ರಯೋಜನಗಳ ಬಗ್ಗೆ ಮತ್ತು ಹೆಚ್ಚು–ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳು ಈ ಚಳವಳಿಯಲ್ಲಿ ಭಾಗವಹಿಸುವ ಅವಶ್ಯಕತೆ ಬಗ್ಗೆ ತಮ್ಮ ಅನುಭವದೊಂದಿನ ಪ್ರೋತ್ಸಾಹದಾಯಕ ಲೇಖನಗಳನ್ನು, ವರದಿಗಳನ್ನು ಮತ್ತು ಮಾಹಿತಿಗಳನ್ನು ನೀಡಿ ಈ ಮಾಸಪತ್ರಿಕೆ ಅರ್ಥಗರ್ಭಿತವಾಗಿ ಮೂಡಿಬರುವಲ್ಲಿ ಹೆಚ್ಚು ಪ್ರೋತ್ಸಾಹಿಸಲು ವಿನಂತಿಸಿದೆ. ಜಿಲ್ಲಾ ಸಂಸ್ಥೆಗಳು ತಮ್ಮ ಜಿಲ್ಲಾ ಮಟ್ಟದ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿಯಲ್ಲಿ ತಮ್ಮ ಜಿಲ್ಲೆಯಲ್ಲಿಯ ಸ್ಥಳೀಯ ಸಂಸ್ಥೆಗಳೂ ನಿರ್ವಹಿಸುವ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿಯನ್ನು ನೀಡಿ, ಪ್ರೋತ್ಸಾಹಿಸಲು ಕೋರಿದೆ.

2024–2025ನೇ ಶೈಕ್ಷಣಿಕ ಸಾಲಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಕಾರ್ಯಕ್ರಮಗಳು, ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಹರ್ಷದಾಯಕ ಮತ್ತು ಅರ್ಥಗರ್ಭಿತ ಗುಣಾತ್ಮಕ ಶಿಕ್ಷಣದ ವರ್ಷ ಆಗುವಲ್ಲಿ ತಮ್ಮೆಲ್ಲರ ಸಲಹೆ, ಸಹಕಾರ, ಪ್ರೋತ್ಸಾಹ ಮತ್ತು ಮಾರ್ಗದರ್ಶನವನ್ನು ಸದಾ ಆಶಿಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## ಪ್ರಕಟಣೆ

ಕರ್ನಾಟಕ ವಿಧಾನಪರಿಷತ್ತಿನ ಮಾಜಿ ಸದಸ್ಯರೂ ಹಾಗೂ ರಾಜ್ಯ ಸಂಸ್ಥೆಯ ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಅವರ ಆಸಕ್ತಿ ಮತ್ತು ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿವೃತ್ತ ನಿರ್ದೇಶಕರೂ ಹಾಗೂ ಕರ್ನಾಟಕ ಗಾಂಧಿ ಪ್ರತಿಷ್ಠಾನದ ಉಪಾಧ್ಯಕ್ಷರಾದ ಶ್ರೀ ಎನ್.ಆರ್. ವಿಶುಕುಮಾರ್ ಅವರ ಸಹಕಾರದಿಂದ ಸ್ಕೌಟ್–ಗೈಡ್ ಚಳವಳಿಗೆ ಸಂಬಂಧಿಸಿದ ರಾಜ್ಯ ಸಂಸ್ಥೆ ಪ್ರಕಟಿಸಿರುವ ಪುಸ್ತಕಗಳನ್ನು, ಮಾಸಪತ್ರಿಕೆಗಳನ್ನು ಗಣಕೀಕರಣಗೊಳಿಸಲಾಗಿದ್ದು, ಇವೆಲ್ಲವೂ ಆನ್‌ಲೈನ್‌ನಲ್ಲಿ ಕಬ್ಸ್–ಬುಲ್‌ಬುಲ್ಸ್‌ಗಳಿಗೆ/ ಸ್ಕೌಟ್ಸ್–ಗೈಡ್ಸ್‌ಗಳಿಗೆ, ರೋವರ್ಸ್–ರೇಂಜರ್ಸ್‌ಗಳಿಗೆ, ದಳನಾಯಕ–ನಾಯಕಿಯರುಗಳಿಗೆ, ತರಬೇತುದಾರರಿಗೆ ವಿವಿಧ ಹಂತಗಳಲ್ಲಿ ಚಳವಳಿಯ ಪದಾಧಿಕಾರಿಗಳಾಗಿ, ಕಾರ್ಯಕರ್ತರಾಗಿ ಸೇವೆಸಲ್ಲಿಸುತ್ತಿರುವರಿಗೆ ಹಾಗೂ ಪೋಷಕರುಗಳಿಗೆ ಲಭ್ಯವಿರುತ್ತದೆ. ಕೆಳಕಂಡ ಆನ್‌ಲೈನ್ ಲಿಂಕ್ ಮೂಲಕ ಅವಶ್ಯಕವಾದ ಮಾಹಿತಿಗಳನ್ನು ಪಡೆಯಬಹುದಾಗಿದೆ.

https://archive.org/details/ServantsOfKnowledge?tab=collection& query=sng.*&sort=-addeddate

# 2023-24ನೇ ಸಾಲಿನ ದ್ವಿತೀಯ ಪಿ.ಯು.ಸಿಯಲ್ಲಿ ಸಾಧನೆ ಮಾಡಿದ ಸ್ಕೌಟ್ಸ್-ಗೈಡ್ಸ್‌ಗಳು



**Rohith Gowda**
589/600 98.1%
Morarji Desai Residential PU College
Dakshina Kannada



**M. Sneha**
589/600 98.1%
Mahila Samaja PU College
Kolar



**Bharataraddy Kinnal**
588/600 98%
Hindu PU College Kotturu
Vijayanagara Dist.



**Bhumika B.R**
585/600 97.5%
Sarvodaya PU College
Horpet, Tumkur



**Chinnu Sangappa Uppaladinni**
584/600 97.3%
Shantinikethan Science PU College
Vijayapur



**Harshitha Prasad**
582/600 97%
St. Paul's PU College
Davangere



**Sneha Mulagund**
581/600 96.8%
Karkala Jnanasudha PU College
Ganit Nagar, Kukundoor Udupi



**Karthik Masagatti**
581/600 96.8%
Vidyaniketan PU College Sriram Nagar TQ
Gangavati, Koppal



**Bhavana .V**
581/600 96.8%
Bengaluru South



**Tejas K.S**
580/600 96.6%
Sri M.V. Composite PU College
Davangere



**Chirag M**
580/600 96.6%
Vidyaniketan PU Science College
Hubballi, Gadag



**Laxmi Hanchinal**
579/600 96.5%
Jain Public School
Vijayapura



**Basavaraj Chapparamani**
578/600 96.3%
HG PU College Sindagi
Vijaypur



**Nikhil**
574/600 95.6%
Sri Venkatramana PU College
Udupi



**Varsha J.A**
573/600 95.5%
St. Marys PU College
Chikkamagaluru



**Bharamappa Dalawai**
571/600 95.1%
Belagavi



**Akash Dundapanavar**
570/600 95%
Shri Chanappa Kunnur PU College
Shiggaon, Haveri



**Harthan A. Nayaka**
570/600 95%
Vision College
Kolar

ಇವರುಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯಿಂದ ತುಂಬು ಹೃದಯದ ಅಭಿನಂದನೆಗಳು

# ಅಭಿನಂದನಾ ಸಮಾರಂಭ




ಮೇ 31 ರಂದು ಜ್ಞಾನಸುಧಾ ಪದವಿಪೂರ್ವ ಕಾಲೇಜು ಕಾರ್ಕಳದಲ್ಲಿ ನಡೆದ ನ್ಯೂಸ್ ಕಾರ್ಕಳ ಅವರ ವತಿಯಿಂದ ಡಾ. ಮೋಹನ್ ಆಳ್ವರವರನ್ನು ಅಭಿನಂದಿಸಲು ಆಯೋಜಿಸಿದ್ದ **"ಸವ್ಯ ಸಾಚಿ ಸಂಭ್ರಮ ನುಡಿ ಸಿರಿ ಸಾಧಕರಿಗೆ–72"** ಅಭಿನಂದನಾ ಸಮಾರಂಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ದಕ್ಷಿಣ ಕನ್ನಡ ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ. ಮೋಹನ್ ಆಳ್ವರರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಡಾ. ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ ಇವರು "ಸವ್ಯಸಾಚಿ ಡಾ. ಮೋಹನ್ ಆಳ್ವ" ಅಭಿನಂದನಾ ಪುಸ್ತಕ ಬಿಡುಗಡೆ ಗೊಳಿಸಿದರು. ಶ್ರೀ ಎನ್. ವಿನಯ್ ಹೆಗ್ಡೆ, ಅಧ್ಯಕ್ಷರು ನಿಟ್ಟೆ ಎಂಜುಕೇಶನ್ ಟ್ರಸ್ಟ್ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ ಸಂಯೋಜಕರಾದ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಸುಧಾಕರ ಶೆಟ್ಟಿ ಸ್ವಾಗತಿಸಿದರು. ಕಾರ್ಕಳದ ಶಾಸಕರಾದ ಮಾನ್ಯಶ್ರೀ ವಿ. ಸುನಿಲ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರು ಹಾಗು ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ. ಮೋಹನ್ ಆಳ್ವ ಅವರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯಿಂದ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.



# ರಾಜ್ಯ ಕಾರ್ಯಕಾರಿ ಸಮಿತಿ ಸಭೆ

ರಾಜ್ಯ ಸಂಸ್ಥೆಯ ಕಾರ್ಯಕಾರಿ ಸಮಿತಿ ಸಭೆಯು 23 ಮೇ 2024 ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೇಲ್ಕಂಡ ಸಭೆಯಲ್ಲಿ ರಾಜ್ಯ ಸಂಸ್ಥೆಯ ವಿವಿದ ಸಮಿತಿಗಳ ನಡಾವಳಿಗಳನ್ನು ಚರ್ಚಿಸಲಾಯಿತು ಹಾಗೂ 2024–25ನೇ ಸಾಲಿನ ಕಾರ್ಯಕ್ರಮ, ಚಟುವಟಿಕೆಗಳು, ತರಬೇತಿಗಳು, ಆಡಳಿತಾತ್ಮಕ ವ್ಯವಸ್ಥೆಗಳ ಬಗ್ಗೆ, ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳ ಅಭಿವೃದ್ಧಿಯ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ 60 ಕ್ಕೂ ಹೆಚ್ಚು ಸದಸ್ಯರುಗಳು ಭಾಗವಹಿಸಿ ಉತ್ತಮ ಸಲಹೆಗಳನ್ನು ನೀಡಿದರು.




# Menstrual Hygiene Day Celebration

ಹೆಣ್ಣು ಮಕ್ಕಳ ಋತುಚಕ್ರದ ಸಂದರ್ಭದಲ್ಲಿನ ಸಮಸ್ಯೆಗಳು, ಅವುಗಳ ನಿವಾರಣೆ ಹೇಗೆ, ಸ್ವಚ್ಛತೆ ಮತ್ತು ಜಾಗೃತಿಯ ಅಂಗವಾಗಿ ಮೇ 22 ರಿಂದ 28 ರ ವರೆಗೆ ವಿಶ್ವ ಸಂಸ್ಥೆ ಘೋಷಣೆಯಂತೆ **'ರೆಡ್ ಪ್ರೈಡ್ ವೀಕ್'** ಎಂದು ಹಾಗೂ ಮೇ 28 ರಂದು **Menstrual Hygiene Day** ಯನ್ನು ಆಚರಿಸಲಾಗಿದೆ.

ಮೇ 22 ರಂದು ಶ್ರೀಮತಿ ಬಿ.ವಿ ಲತಾ, ಎ.ಎಸ್.ಸಿ (ಗೈಡ್ಸ್) ಇವರು ವೆಬಿನಾರ್‌ನಲ್ಲಿ ಉಪನ್ಯಾಸವನ್ನು ನೀಡಿದರು. ಕರ್ನಾಟಕ ರಾಜ್ಯದಲ್ಲಿ ಅನೇಕ ಜಿಲ್ಲೆಯವರು ಈ ಕಾರ್ಯಕ್ರಮದ ಬಗ್ಗೆ ಹೆಣ್ಣು ಮಕ್ಕಳಿಗೆ ಜಾಗೃತಿಯನ್ನು ಮೂಡಿಸಿ ತಿಳುವಳಿಕೆಯನ್ನು ನೀಡಿದ್ದಾರೆ. ಬಾಗಲಕೋಟೆ, ದಕ್ಷಿಣ ಕನ್ನಡ, ಬೆಂಗಳೂರು ಉತ್ತರ, ಉಡುಪಿ, ದಾವಣಗೆರೆ, ಗದಗ ಹಾಗೂ ಅನೇಕ ಜಿಲ್ಲೆಗಳಿಂದ ರೋವರ್ಸ್, ರೇಂಜರ್ಸ್‌ಗಳು ಈ ವಿಷಯದ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಕಾಲೇಜುಗಳಲ್ಲಿ ಆಚರಿಸಿ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರತಿಜ್ಞೆಯನ್ನು ಸ್ವೀಕರಿಸಿ ಜಾಗೃತಿಯನ್ನು ಮೂಡಿಸಿರುತ್ತಾರೆ.

## ಮೈಸೂರು ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಕ್ರೀಡಾಕೂಟದ ಸಮಾರೋಪ ಸಮಾರಂಭ



ಮೇ 28 ರಂದು ಮೈಸೂರು ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ 2023–24ನೇ ಸಾಲಿನ ವಾರ್ಷಿಕ ಕ್ರೀಡಾಕೂಟದಲ್ಲಿ, ಎನ್.ಎಸ್.ಎಸ್., ಎನ್.ಸಿ.ಸಿ., ರೆಡ್‌ಕ್ರಾಸ್ ಮತ್ತು ರೋವರ್ಸ್ ಮತ್ತು ರೇಂಜರ್ಸ್ ಘಟಕಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಭಾರತೀಯ ರಾಷ್ಟ್ರೀಯ ವಾಲಿಬಾಲ್ ತಂಡದ ತರಬೇತುದಾರರಾದ ಡಾ॥ ಎನ್.ಬಿ. ಸುರೇಶ್‌ರವರು ಪ್ರತಿಯೊಬ್ಬರೂ ದಿನವೂ ಒಂದು ಗಂಟೆ ಕಾಲ ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಂಡರೆ, ಆರೋಗ್ಯ ವೃದ್ಧಿಸುವುದಲ್ಲದೇ, ಏಕಾಗ್ರತೆ, ನೆನಪಿನ ಶಕ್ತಿ ಹೆಚ್ಚಿಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ರಾಜ್ಯ ಸಂಸ್ಥೆಯ ಗೈಡ್ಸ್ ಆಯುಕ್ತರಾದ ಶ್ರೀಮತಿ ಗೀತಾ ನಟರಾಜ್‌ರವರು ಅತಥಿಗಳಾಗಿ ಭಾಗವಹಿಸಿ ಮಾತನಾಡಿ ಸಾಹಸ ಚಟುವಟಿಕೆಗಳ ಮೂಲಕ ಕೂಟಗಳಲ್ಲಿ ಆತ್ಮಸ್ಥೈರ್ಯ ತುಂಬುವುದರ ಜೊತೆಗೆ ಬದುಕನ್ನು ರೂಪಿಸಿಕೊಳ್ಳಲು ಹಾಗೂ, ಪ್ರಕೃತಿದತ್ತ ಸಂಪನ್ಮೂಲಗಳನ್ನು ಸದುಪಯೋಗ ಪಡಿಸಿಕೊಂಡು ಅವುಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸಬೇಕಾದ ಹೊಣೆಗಾರಿಕೆ ಯುವ ಜನತೆಯ ಮೇಲಿದೆ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ವಿ. ವಸಂತಕುಮಾರ್‌ರವರು ಇಲ್ಲಿಯ ರೇಂಜರ್ಸ್ ಹಾಗೂ ರೇಂಜರ್ಸ್ ನಾಯಕಿಯರಿಗೂ ಅತ್ಯಂತ ಪ್ರೋತ್ಸಾಹ ನೀಡುತ್ತಿದ್ದು, ಅವರಿಗೆ ಧನ್ಯವಾದಗಳನ್ನು ಹೇಳುತ್ತಾ, ಮುಂದೆಯೂ ಇನ್ನು ಹೆಚ್ಚಿಗೆ ಸಹಕಾರವನ್ನು ನಮ್ಮ ಚಳವಳಿಯ ರೇಂಜರ್ಸ್ ಘಟಕಗಳಿಗೆ ನೀಡಬೇಕೆಂದು ಕೋರಿದರು.

ಕಾಲೇಜಿನ ಕ್ರೀಡಾ ಕೂಟದಲ್ಲಿ ವಿಜೇತರಾದ ಎಲ್ಲಾ ಮಕ್ಕಳನ್ನು ಸನ್ಮಾನಿಸಲಾಯಿತು. ಸಭೆಯಲ್ಲಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕೆ.ಎಸ್. ಭಾಸ್ಕರ್, ಶ್ರೀ ಸಿ.ಎಸ್. ಮೋಹನ್ ಕುಮಾರ್ ವಿವಿಧ ಘಟಕಗಳ ಸಂಚಾಲಕರಾದ ಶ್ರೀಮತಿ ಪೂರ್ಣಿಮಾ ರೇಂಜರ್ಸ್ ಲೀಡರ್, ಶ್ರೀ ಪಿ. ರಘು, ಶ್ರೀಮತಿ ಲಕ್ಷ್ಮಿ, ಶ್ರೀ ಚಂದ್ರಕುಮಾರ್ ಹಾಗೂ ಶ್ರೀಮತಿ ಸೌಮ್ಯ ಉಪಸ್ಥಿತರಿದ್ದರು.

# 2023-24ನೇ ಸಾಲಿನ ಎಸ್.ಎಸ್.ಎಲ್.ಸಿಯಲ್ಲಿ ಸಾಧನೆ ಮಾಡಿದ ಸ್ಕೌಟ್ಸ್-ಗೈಡ್ಸ್‌ಗಳು



**Manya .R**
621/625 99.36%
R T Nagar public school
Bangalore North



**Avni P Jain**
620/625 99.20%
Acred Heart English
Medium School, Udupi



**Trisha .S**
620/625 99.20%
Sri Ramakrishna High School
Dakshina Kannada



**Bhargavi Maiya U.N**
620/625 99.20%
Sri Vyasa Maharshi Vidya
Peetha, Mulki, D.K



**Bhashitha K.D**
619/625 99.04%
Lions High School
kodagu



**Poornashree M.C**
619/625 99.04%
Nalanda High School
Doddaballapura, Bengaluru Rural



**Afsana Banu**
619/625 99.04%
Gyarahalli Thammayya
World Academy, Hassan



**Lavanya .S**
619/625 99.04%
Model English High School
Chikkamagalur



**Ishana**
619/625 99.04%
Alvas English Medium High School
Moodbidri, Dakshina Kannada



**Monisha D**
619/625 99.04%
Sri Sai International School
Chikkamagalur



**Sushan Narayana Billava**
619/625 99.04%
Sandeepan English Medium
School, Udupi



**Vedhika N. Raykar**
619/625 99.04%
Kasturba Girls High School
Shimoga



**Anvith S**
619/625 99.04%
S.V.S. English Medium School
Vidyagiri Bantwal, D.K



**Sajni S. Kulal**
619/625 99.04%
Jnana Sudha School
Udupi



**Ranjan Ramesh Nayak**
618/625 98.88%
Karkala Jnanasudha English Medium
High School Ganitnagar, Udupi



**Saagarika G. Rao**
564/600 94% (ICSE)
Mitra Academy
Bengaluru South



**Shreenidhi**
618/625 98.88%
Vivekananda English Medium School
Tenkila Puttur, D.K.



**Niveditha Kamath**
616/625 98.56%
Shri Vyasa Maharshi
Vidya Peetha, D.K.



**Kshethija Bhatt**
616/625 98.56%
Sri Marikamba High School
Sirsi



**Tarun Tirakayya Hiremath**
616/625 98.56%
Shree V.B.K High School
Motebennur, Haveri

ಇವರುಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯಿಂದ ತುಂಬು ಹೃದಯದ ಅಭಿನಂದನೆಗಳು

# 2023-24ನೇ ಸಾಲಿನ ಎಸ್.ಎಸ್.ಎಲ್.ಸಿಯಲ್ಲಿ ಸಾಧನೆ ಮಾಡಿದ ಸ್ಕೌಟ್ಸ್-ಗೈಡ್ಸ್‌ಗಳು



**Navami .M**
615/625 98.4%
Vani English Medium School
Dakshina Kannada



**Abhijna S. Shetty**
615/625 98.4%
Vani English Medium School
Dakshina Kannada



**Tarun Prabhu**
615/625 98.4%
Sandeepan English
Medium School, Udupi



**Joslyn Agnes Dsouza**
615/625 98.4%
Maryvale High School
Dakshina Kannada



**Adhya H.J**
615/625 98.4%
Kumaraswamy Vidyalaya
Dakshina Kannada



**Harsha M.H**
615/625 98.4%
St. Mary's School Laila
Dakshina Kannada



**Bhoomika Devidas Nayaka**
615/625 98.4%
Ave Mariya High School
Sirisi



**P.V. Vidisha**
614/625 98.24%
Indraprastha Vidyalaya
Upinangady, Dakshina Kannada



**Milan J**
614/625 98.24%
Sri Sathya Sai Loka Seva
High School, Alike, D.K



**Sinchana J.R**
614/625 98.24%
N.M.K. High School
Davanagere



**Mohammed Azhan**
614/625 98.24%
Model English High School
Chikkamagalur



**Royston Francis Lewis**
614/625 98.24%
Nirmala English Medium School
Udupi



**Sanchita S Suvarna**
613/625 98.08%
Rotary English Medium School
Dakshina Kannada



**Navya Shetty**
613/625 98.08%
Shri K.S.S Government
High School, Hakladi, Udupi



**Soukya Vinayaka Hegade**
612/625 97.36%
Sri Gajananna Secondary
School, Hegadekatta, Sirisi



**Hunaina Parveen**
612/625 97.92%
St. Marys English Medium
School, Shivmoga



**Ramyashree S.V**
612/625 97.92%
MDRS Kolumenahalli
Chikkaballapura



**Bhumika Shrisail Jodatti**
612/625 97.92%
Alvas Kannada Medium High School
puttige, Dakshina Kannada



**Apoorva**
612/625 97.92%
St. Victor Girls High School
Puttur, Dakshina Kannada



**Navya M.J**
611/625 97.7%
Nalanda School, Doddaballapura
Bengaluru Rural

ಇವರುಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯಿಂದ ತುಂಬು ಹೃದಯದ ಅಭಿನಂದನೆಗಳು

## 2023-24ನೇ ಸಾಲಿನ ಎಸ್.ಎಸ್.ಎಲ್.ಸಿಯಲ್ಲಿ ಸಾಧನೆ ಮಾಡಿದ ಸ್ಕೌಟ್ಸ್-ಗೈಡ್ಸ್‌ಗಳು



**Varana K**
611/625 97.7%
Nalanda School, Doddaballapura
Bengaluru Rural



**R. Jothiga**
611/625 97.7%
Gyarahalli Thammayya World
Academy, Hassan



**Chirag M. Rao**
611/625 97.7%
Nithyadar English Medium School
Dakshina Kannada



**Spoorthy M.N**
611/625 97.7%
Chirec Public School
Madhugiri

**ಇವರುಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯಿಂದ ತುಂಬು ಹೃದಯದ ಅಭಿನಂದನೆಗಳು**

## ಜೂನ್ 2024ರ ಕಾರ್ಯಕ್ರಮಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಕೃಷ್ಣರಾಜೇಂದ್ರ ಒಡೆಯರ್ ಹುಟ್ಟು ಹಬ್ಬ | 04.06.2024 | ಎಲ್ಲಾ ಹಂತಗಳಲ್ಲಿ |
| 2 | ವಿಶ್ವ ಪರಿಸರ ದಿನಾಚರಣೆ | 05.06.2024 | ಎಲ್ಲಾ ಹಂತಗಳಲ್ಲಿ |
| 3 | ದಳಗಳನ್ನು ಪ್ರಾರಂಭಿಸಿ ಪೆಟ್ರೋಲ್‌ಗಳ ರಚನೆ | | ದಳ ಹಂತಗಳಲ್ಲಿ |
| 4 | ತೃತೀಯ ಸೋಪಾನ ಪರೀಕ್ಷೆಗಳು | | ಜಿಲ್ಲಾ ಹಂತಗಳಲ್ಲಿ |
| 5 | ನಾಯಕತ್ವ ತರಬೇತಿ ಶಿಬಿರಗಳು ಕಬ್, ಬುಲ್ ಬುಲ್ಸ್, ಸ್ಕೌಟ್ಸ್, ಗೈಡ್ಸ್ ಮತ್ತು ರೋವರ್ಸ್, ರೇಂಜರ್ಸ್ | | ಸ್ಥಳೀಯ ಮತ್ತು ಜಿಲ್ಲಾ ಹಂತಗಳಲ್ಲಿ |
| 6 | ಡೈಲಾಗ್ ಕೆಫೆ ಸಂವಾದ ಕಾರ್ಯಕ್ರಮ | | ರಾಜ್ಯ ಮಟ್ಟದಲ್ಲಿ |
| 7 | ಎಸ್.ಎಸ್.ಎಲ್.ಸಿ. ಟಾಪರ್ಸ್‌ಗಳಿಗೆ ಗೌರವ ಸಮರ್ಪಣೆ | 16.06.2024 | ಆರ್.ಟಿ.ನಗರ ಪಬ್ಲಿಕ್ ಸ್ಕೂಲ್ ಆರ್.ಟಿ.ನಗರ, ಬೆಂ. ಉತ್ತರ |
| 8. | ಎಸ್.ಎಸ್.ಎಲ್.ಸಿ. ಟಾಪರ್ಸ್‌ಗಳಿಗೆ ಗೌರವ ಸಮರ್ಪಣೆ | 17.06.2024 | ಸ್ಕೌಟ್ ಗೈಡ್ ಕನ್ನಡ ಭವನ, ಮೂಡುಬಿದಿರೆ, ದಕ್ಷಿಣ ಕನ್ನಡಜಿಲ್ಲೆ |
| 9 | ಅಂತರಾಷ್ಟ್ರೀಯ ಯೋಗ ದಿನಾಚರಣೆ | 21.06.2024 | ಎಲ್ಲಾ ಹಂತಗಳಲ್ಲಿ |
| 10 | ಸ್ಕೌಟರ್ಸ್ ಮತ್ತು ಗೈಡರ್ಸ್ ಸಮಾವೇಶಗಳು | | ಸ್ಥಳೀಯ ಹಂತಗಳಲ್ಲಿ |
| 11 | ಪ್ರಾರಂಭಿಕ ಶಿಬಿರಗಳು | | ಸ್ಥಳೀಯ ಹಂತಗಳಲ್ಲಿ |
| 12 | ಮೂಲ ತರಬೇತಿ ಶಿಬಿರಗಳು | | ಜಿಲ್ಲಾ ಹಂತಗಳಲ್ಲಿ |
| 13 | ಬನ್ನಿ ಲೀಡರ್ಸ್ ತರಬೇತಿ ಶಿಬಿರ | | ಜಿಲ್ಲಾ ಹಂತಗಳಲ್ಲಿ |
| 14 | ಶಿಕ್ಷಣ ಇಲಾಖಾ ಅಧಿಕಾರಿಗಳ ಒಂದು ದಿನದ ಸ್ಕೌಟ್-ಗೈಡ್ ಮಾಹಿತಿ ಸಭೆ | | ರಾಜ್ಯ ಮಟ್ಟದಲ್ಲಿ |
| 15 | ಮುಖ್ಯ ಶಿಕ್ಷಕರುಗಳಿಗೆ ಒಂದು ದಿನದ ಸ್ಕೌಟಿಂಗ್ ಗೈಡಿಂಗ್ ಮಾಹಿತಿ ಶಿಬಿರ | | ರಾಜ್ಯ ಮಟ್ಟದಲ್ಲಿ |
| 16 | ರಾಜ್ಯ ಮಟ್ಟದಿಂದ ವಿಭಾಗೀಯ ಮಟ್ಟದಲ್ಲಿ ಆಯೋಜಿಸಿರುವ ಮುಂದುವರೆದ ತರಬೇತಿ ಶಿಬಿರಗಳು | 24 ರಿಂದ 30 ಜೂನ್ 2024 | |

ಸ್ಥಳ:
- ಡಾ|| ಆನಿಬೆಸೆಂಟ್ ಸ್ಕೌಟ್ಸ್ ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ
- ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ
- ಕೊಪ್ಪಳ ಜಿಲ್ಲಾ ಸ್ಕೌಟ್ಸ್ ಗೈಡ್ಸ್ ತರಬೇತಿ ಕೇಂದ್ರ, ಗುನ್ನಾಳ, ಕೊಪ್ಪಳ
- ವಾಸಂತಿಬಾಯಿ ಜಿಗಜಿನಿ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರ ಬುರಣಾಪುರ, ವಿಜಯಪುರ
- ಡಾ|| ವಿ.ಎಸ್. ಆಚಾರ್ಯ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರ, ಪ್ರಗತಿನಗರ, ಉಡುಪಿಜಿಲ್ಲೆ




# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

* ಮೇ 02 ರಂದು ಬಸವೇಶ್ವರ ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ ಬಾಗಲಕೋಟೆ ಇಲ್ಲಿ ಬೇಸಿಗೆ ಶಿಬಿರವನ್ನು ಸಸಿಗೆ ನೀರುಣಿಸುವ ಮೂಲಕ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ, ಪ್ರಾಚಾರ್ಯರಾದ ಶ್ರೀಮತಿ ಎಸ್.ಜೆ. ಬಡೆಯರ, ಸಂಘಟಕರಾದ ಶ್ರೀ ಪ್ರಮೋದ ಚೌಗುಲೆರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿರವರು ಸ್ಕೌಟ್ಸ್-ಗೈಡ್ಸ್ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಐ.ಕ್ಯೂ.ಎ.ಸಿ. ಸಂಯೋಜಕರಾದ ಶ್ರೀಮತಿ ಪಿ.ಕೆ. ಚೌಗಲಾ, ಶ್ರೀಮತಿ ವಂದನಾ ಸತ್ತಿಗೇರಿ ಕಾಲೇಜಿನ ಉಪನ್ಯಾಸಕರುಗಳು ಮತ್ತು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.




* ಮೇ 015 ರಂದು ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ ಬಾಗಲಕೋಟೆ ಇಲ್ಲಿ ಬೇಸಿಗೆ ಶಿಬಿರವನ್ನು ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ, ಪ್ರಾಚಾರ್ಯ ಡಾ. ಜಗನ್ನಾಥ ಚವ್ಹಾಣ, ಸಂಘಟಕ ಶ್ರೀ ಪ್ರಮೋದ ಚೌಗುಲೆರವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟನೆಯನ್ನು ಮಾಡಿದರು. ಈ ಸಂದರ್ಭದಲ್ಲಿ ಐ.ಕ್ಯೂ.ಎ.ಸಿ. ಸಂಯೋಜಕರಾದ ಶ್ರೀಮತಿ ಜೆ.ಎಂ. ಸಾವದಗಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ನಂಜುಂಡಸ್ವಾಮಿ ರೇಂಜರ್ ಲೀಡರ್ ಡಾ. ಐ.ಕೆ. ಮಠದ ರೋವರ್ ಸ್ಕೌಟ್ಸ್ ಲೀಡರ್ ಶ್ರೀ ಎಸ್.ಜೆ. ಪತ್ತಾರ, ಕಾಲೇಜು ಉಪನ್ಯಾಸಕರು ಮತ್ತು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.




## ಬೆಳಗಾವಿ

* ಮೇ 04 ರಿಂದ 05ರ ವರೆಗೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂನ ಸೆಂಟ್ ಥೆರೆಸ್ಸಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್‌ಗಳಿಗೆ ಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿತ್ತು. ಶಿಬಿರವು ಸ್ಕೌಟ್ ಮತ್ತು ಗೈಡ್ ಧ್ವಜಾರೋಹಣದೊಂದಿಗೆ ಪ್ರಾರಂಭವಾಯಿತು. ಆಡಳಿತ ಮಂಡಳಿಯ ವ್ಯವಸ್ಥಾಪಕರಾದ ಸಿಸ್ಟರ್ ಸೋಫಿ ಹಾಗೂ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ ಶಿಕ್ಷಕರುಗಳು ಉಪಸ್ಥಿತರಿದ್ದರು. ಶ್ರೀ ಡಿ.ಬಿ. ಅತ್ತಾರ ಎ.ಎಸ್.ಓ.ಸಿ. ಸ್ಕೌಟ್, ಇವರು ಮಕ್ಕಳಿಗೆ ಚಳುವಳಿಯ ಇತಿಹಾಸ, ಮೂಲತತ್ತ್ವಗಳು ಮುಂತಾದ ವಿಷಯಗಳ ಬಗ್ಗೆ ಬೋಧಿಸಿದರು.



ಮೇ 07 ರಂದು ನಡೆದ ಲೋಕ ಸಭಾ ಚುನಾವಣೆಯ ಮತಗಟ್ಟೆಗಳಲ್ಲಿ ಬೆಳಗಾವಿ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ ರೋವರ್ ಮತ್ತು ರೇಂಜರ್‌ಗಳು ಸೇವೆ ಸಲ್ಲಿಸಿದರು.

## ಬೆಂಗಳೂರು ಉತ್ತರ

* ಬೆಂಗಳೂರು ಉತ್ತರಜಿಲ್ಲೆ ವತಿಯಿಂದ ಜಿಲ್ಲಾ ಮಟ್ಟದ ಸ್ಕೌಟ್ಸ್-ಗೈಡ್ಸ್, ಕಬ್-ಬುಲ್‌ಬುಲ್ ಶಿಕ್ಷಕರ ಪ್ರಾಥಮಿಕ ಶಿಬಿರ ಹಾಗೂ ಮುಂದುವರಿದ ಶಿಬಿರವನನ್ನು ಮೇ 13 ರಿಂದ 19ರ ವರೆಗೆ ಮತ್ತು ಮೇ 15 ರಿಂದ 17ರ ವರೆಗೆ ಬನ್ನಿ ಅಂಟಿ ತರಬೇತಿಯನ್ನು ಡಾ. ಅನಿ ಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಇಲ್ಲಿ ನಡೆಸಲಾಯಿತು. ಸ್ಕೌಟ್ಸ್ ವಿಭಾಗದ ಮುಂದುವರಿದ ಶಿಬಿರದ ನಾಯಕರಾಗಿ ಶ್ರೀ ಬಿ. ಅನಂದ ಅಡಿಗ, ಗೈಡ್ಸ್ ವಿಭಾಗದ ನಾಯಕರಾಗಿ ಶ್ರೀಮತಿ ಸ್ಟೆಲ್ಲಾ, ಕಬ್ ವಿಭಾಗದ ನಾಯಕರಾಗಿ



ಶ್ರೀ ಹುಸೇನಿ, ಪ್ಲಾಕ್ ವಿಭಾಗದ ನಾಯಕರಾಗಿ ಶ್ರೀಮತಿ ಮೇರಿಫಿಲೋಮಿನಾ ಹಾಗೂ ಪ್ರಾಥಮಿಕ ಶಿಬಿರದ ಸ್ಕೌಟ್ಸ್ ವಿಭಾಗದ ನಾಯಕರಾಗಿ ಶ್ರೀ ಚಂದ್ರಶೇಖರ್ ಗೈಡ್ಸ್ ವಿಭಾಗದ ನಾಯಕರಾಗಿ ಶ್ರೀಮತಿ ನಿರ್ಮಲ ದೊರೆಸ್ವಾಮಿ ಕಬ್ ವಿಭಾಗದ ನಾಯಕರಾಗಿ ಶ್ರೀ ಬಿ. ಆಂಜನೇಯ, ಪ್ಲಾಕ್ ವಿಭಾಗದ ನಾಯಕರಾಗಿ ಶ್ರೀಮತಿ ಗೌರಾ ಬಾಯಿ ಇವರು ಸಹಕರಿಸಿದರು. ಬನ್ನಿ ಅಂಟಿ ಶಿಬಿರದ ನಾಯಕರಾಗಿ ಶ್ರೀಮತಿ ಸುಶೀಲ ಮಹಾದೇವ ಇವರು ಸಹಕರಿಸಿದರು.

ಮೇ 18 ರಂದು ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪಗೌಡ ಇವರು ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಶಿಬಿರಾರ್ಥಿಗಳಿಗೆ ಶಿಕ್ಷಣ ಹಾಗೂ ಸ್ಕೌಟಿಂಗ್ ಬಗ್ಗೆ ಮಾಹಿತಿ ನೀಡಿದರು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಪ್ರಸನ್ನಕುಮಾರ್ ಭಾಗವಹಿಸಿ ಶಿಬಿರದ ನಾಯಕರಿಗೆ ಹಾಗೂ ಸಹನಾಯಕರಿಗೆ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದರು. ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಸತ್ಯಜೀತ್ ಚಟಾರ್ಜಿ ಇವರು ಶಿಬಿರದಲ್ಲಿ ಸಹಕರಿಸಿದರು. ರಾಜ್ಯ ತರಬೇತಿ ಆಯುಕ್ತಕರು (ಸ್ಕೌಟ್ಸ್) ಆದ ಶ್ರೀ ನಾಗೇಶ್ ಆರ್. ಶಿವಪುರ ಆಗಮಿಸಿ ಭೋದಿಸಿದಲ್ಲದೇ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು ಶ್ರೀ ಬಿ.ಕೆ ಶೇಷಾದ್ರಿ ಶಿಬಿರವನ್ನು ಸಂಘಟಿಸಿದರು.

* **HAL Rover Crew conducted Summer Camp from 6th to 11th May 2024, Nearly 68 children participated in the Camp. Smt. Susheela Mahadev, Sri P. Nandakumar, Sri Chakravathi, Smt. Bharathi Chakravathi visited the camp and took session. The camp was entirely free for children.**



## ಬೆಂಗಳೂರು ಪೂರ್ವ

* ಏಪ್ರಿಲ್ 19 ರಂದು ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಆನೇಕಲ್ ನಗರದಲ್ಲಿ ಮತದಾರರಲ್ಲಿ ಮತದಾನದ ಮಹತ್ವದ ಕುರಿತಾಗಿ ಜನಜಾಗೃತಿ ಮೂಡಿಸಲು ಬೈಕ್‌ರ್ಯಾಲಿ ಆಯೋಜಿಸಲಾಗಿತ್ತು. ಸದರಿ ಬೈಕ್ ರ್ಯಾಲಿಯನ್ನು ಬೆಂಗಳೂರು ಮತದಾನ ರಾಯಭಾರಿ ಶ್ರೀಮತಿ ನೀತು ವನಜಾಕ್ಷಿ ಉದ್ಘಾಟಿಸಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಕಾಂತರಾಜು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಶ್ರೀ ಸಿ.ಎಸ್. ಶ್ರೀನಾಥ್ ಗೌಡ, ವಿವಿಧ ಇಲಾಖೆಗಳ ಅಧಿಕಾರಿಗಳು, ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್, ಹೆಬ್ಬಗೋಡಿಯ ಎಸ್.ಎಫ್.ಎಸ್. ಕಾಲೇಜು, ಜಿಗಣಿಯ ಎಸ್.ಎನ್.ಆರ್.ಸಿ ಕಾಲೇಜು, ಭಗತ್ ಸಿಂಗ್ ಓಪನ್ ರೋವರ್ ತಂಡಗಳ ರೋವರ್ಸ್, ರೇಂಜರ್ಸ್ ಭಾಗವಹಿಸಿದ್ದರು.



* ಏಪ್ರಿಲ್ 25 ರಂದು ಅಲಿಯನ್ಸ್ ಕಾಲೇಜಿನಲ್ಲಿ ಮತಗಟ್ಟೆಗಳ ವಿತರಣಾ ಕೇಂದ್ರ ತರೆಯಲಾಗಿತ್ತು. ಇಲ್ಲಿಗೆ ಬಂದ ಮತಗಟ್ಟೆ ಅಧಿಕಾರಿಗಳಿಗೆ ಊಟೋಪಚಾರದ ವ್ಯವಸ್ಥೆ ಅಚ್ಚುಕಟ್ಟಾಗಿ ನಿರ್ವಹಿಸುವ ಜವಾಬ್ದಾರಿಯಲ್ಲಿ ಹೆಬ್ಬಗೋಡಿಯ ಎಸ್.ಎಫ್.ಎಸ್. ಕಾಲೇಜು, ಚಂದಾಪುರದ ಸ್ವಾಮಿ ವಿವೇಕಾನಂದ ಕಾಲೇಜು ಹಾಗೂ ಭಗತ್ ಸಿಂಗ್ ಓಪನ್ ಸ್ಕೌಟ್ ತಂಡಗಳ ರೋವರ್ಸ್, ರೇಂಜರ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ನೆರವಾದರು.



* ಏಪ್ರಿಲ್ 26 ರಂದು ರಾಜ್ಯದಲ್ಲಿ ಮೊದಲಸುತ್ತಿನ ಲೋಕಸಭಾ ಸಾರ್ವತ್ರಿಕ ಚುನಾವಣೆ ನಡೆಯಿತು. ಆನೇಕಲ್ ತಾಲ್ಲೂಕಿನ ಸುಮಾರು 200 ಚುನಾವಣಾ ಬೂತ್‌ಗಳಲ್ಲಿ 300 ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ಹಾಗೂ ಸ್ಕೌಟರ್, ಗೈಡರ್‌ಗಳು ಸೇವೆ ಸಲ್ಲಿಸಿದರು.

## ಚಿಕ್ಕಮಗಳೂರು

* ಏಪ್ರಿಲ್ 12 ರಿಂದ 16ರ ವರೆಗೆ ಶ್ರೀ ಸಾಯಿ ಇಂಟರ್ ನ್ಯಾಷನಲ್ ಶಾಲೆ ತರೀಕೆರೆ ಇಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಸುಮಾರು 162 ಮಂದಿ ಸ್ಕೌಟ್-ಗೈಡ್ ಮಕ್ಕಳು ಭಾಗವಹಿಸಿದ್ದರು.



* ಏಪ್ರಿಲ್ 20 ರಿಂದ 25ರ ವರೆಗೆ ಸರಕಾರಿ ಶಾಸಕರ ಮಾದರಿ ಬಾಲಕರಶಾಲೆ, ಬೀರೂರು ಇಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಸುಮಾರು 100 ಮಂದಿ ಸ್ಕೌಟ್-ಗೈಡ್, ಕಬ್-ಬುಲ್‌ಬುಲ್ ಮಕ್ಕಳು ಭಾಗವಹಿಸಿದ್ದರು.



* ಮೇ 15 ರಿಂದ 17ರ ವರೆಗೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಿಡುವಳೆ, ಮೂಡಿಗೆರೆ ಇಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಸುಮಾರು 30 ಮಂದಿ ಸ್ಕೌಟ್-ಗೈಡ್, ಕಬ್- ಬುಲ್‌ಬುಲ್ ಮಕ್ಕಳುಭಾಗವಹಿಸಿದ್ದರು.



## ಚಿಕ್ಕಬಳ್ಳಾಪುರ

* ಏಪ್ರಿಲ್ 21 ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ, ತಾಲ್ಲೂಕು ಆಡಳಿತ ಮತ್ತು ತಾಲ್ಲೂಕು ಪಂಚಾಯತ್, ಚಿಕ್ಕಬಳ್ಳಾಪುರ, ಜಿಲ್ಲಾ ಮತ್ತು ತಾಲ್ಲೂಕು ಸ್ವೀಫ್ ಸಮಿತಿ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ ಸಹಯೋಗದಲ್ಲಿ ಮತದಾನದ ಅರಿವು ಕಾರ್ಯಕ್ರಮ ಸಂಘಟಿಸಲಾಗಿತ್ತು. ನಗರದ ಉಪ ವಿಭಾಗಧಿಕಾರಿಗಳ ಕಛೇರಿ ಆವರಣದಲ್ಲಿ ಹಾಗೂ ವಿವಿಧ ರಸ್ತೆಗಳಲ್ಲಿ ಕಡ್ಡಾಯವಾಗಿ ಮತದಾನ ಮಾಡುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತ್ತು. ಈ ಕಾರ್ಯಕ್ರಮಕ್ಕೆ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀರವೀಂದ್ರರವರು ಚಾಲನೆ ನೀಡಿದರು. ಜಿಲ್ಲಾ, ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಜಿಲ್ಲಾ/ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಮತ್ತು ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳು ಭಾಗವಹಿಸಿ ಯಶಸ್ವಿಗೊಳಿಸಿದರು.




* ಏಪ್ರಿಲ್ 23 ರಂದು ವಿದುರಾಶ್ವತ್ತ ಜಾತ್ರಾ ಮಹೋತ್ಸವದಲ್ಲಿ ಗೌರಿಬಿದನೂರು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಗಿರಿಧರ್ ರವರ ನೇತೃತ್ವದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗೌರಿಬಿದನೂರು ರೋವರ್ಸ್ ವಿದ್ಯಾರ್ಥಿಗಳು ಜಾತ್ರೆಯ ಎಲ್ಲಾ ಹಂತದ ಸೇವಾ ಕಾರ್ಯದಲ್ಲಿ ಭಾಗವಹಿಸಿದರು.



* ಏಪ್ರಿಲ್ 28 ರಿಂದ 30ರ ವರೆಗೆ ಬೇಸಿಗೆ ಶಿಬಿರವನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ನಗರದ ಎಸ್.ಆರ್. ಸಿಟಿಜನ್ ಶಾಲೆಯಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶ್ರೀ ರಾಮಚಂದ್ರ ರೆಡ್ಡಿ ರವರು "ಸ್ಕೌಟ್ಸ್ ಮತ್ತು ಗೈಡ್ಸ್‌ನ ವಿದ್ಯಾರ್ಥಿಗಳು ಭಾವಿ ಭಾರತದ ಭವಿಷ್ಯವನ್ನು ರೂಪಿಸುವ ರೂವಾರಿಗಳು ಆಗಿದ್ದು ಸತ್ಪ್ರಜೆಗಳಾಗಿ ಹೊರಹೊಮ್ಮಿಸುವ ಕೆಲಸ ಈ ರೀತಿ ಶಿಬಿರಗಳಿಂದ ಆಗಬೇಕು" ಎಂದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸತೀಶ್ ಎನ್. ಮಾತನಾಡುತ್ತಾ ಈ ಬಾರಿ ರಾಜ್ಯಪಾಲರ ಪ್ರಶಸ್ತಿಗಾಗಿ ಆಯ್ಕೆ ಆಗಿರುವ ವಿದ್ಯಾರ್ಥಿಗಳಿಗೆ ಶುಭಾಶಯಗಳನ್ನು ತಿಳಿಸಿ ಜೀವನದಲ್ಲಿ ಉನ್ನತಿ ಸಾಧಿಸಬೇಕೆಂದು ಹೇಳಿದರು.



## ದಕ್ಷಿಣ ಕನ್ನಡ

ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳ, ಜಿಲ್ಲಾ ಸಹಾಯಕ ಆಯುಕ್ತರುಗಳ, ಜಿಲ್ಲಾ ಪದಾಧಿಕಾರಿಗಳ ಹಾಗೂ ತರಬೇತಿದಾರರಿಗೆ ಮೇ 07 ರಂದು ದಕ್ಷಿಣ ಕನ್ನಡ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ್ ಆಳ್ವರವರ ಅಧ್ಯಕ್ಷತೆಯಲ್ಲಿ ಒಂದು ದಿನ ಮಾಹಿತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ವಸಂತ್ ರಾವ್‌ರವರು ನೂತನ ಪದಾಧಿಕಾರಿಗಳ ಪರಿಚಯವನ್ನು ಮಾಡಿದರು. ಜಿಲ್ಲಾ ಸಂಘಟನಾ ಆಯುಕ್ತರಾದ ಶ್ರೀ ವಸಂತ ಕೆ., ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಶಾಂತರಾಮ ಪ್ರಭು ರಾಜ್ಯ ಸಹ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ ಕೆ.ರವರು ವಿವಿಧ ವಿಷಯಗಳ ಬಗ್ಗೆ ಮಾಹಿತಿ ನೀಡಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಜಯವಂತಿ ಸೋನ್ಸ್ ಅತಿಥಿಗಳನ್ನು ಸ್ವಾಗತಿಸಿದರು. ಜಿಲ್ಲಾ ಸಂಘಟನಾ ಆಯುಕ್ತರು (ಗೈ) ಶ್ರೀಮತಿ ಸುನೀತಾರವರು ಧನ್ಯವಾದಗಳನ್ನು ನೀಡಿದರು. ಜಿಲ್ಲಾ ತರಬೇತಿ ಆಯುಕ್ತೆ (ಗೈ) ಶ್ರೀಮತಿ ಜಯಶ್ರೀರವರು ಕಾರ್ಯಕ್ರಮವನ್ನು ನಿರ್ವಹಿಸಿದರು.



## ದಾವಣಗೆರೆ

* ಏಪ್ರಿಲ್ 12 ರಿಂದ 16ರ ವರೆಗೆ ದಾವಣಗೆರೆ ದಕ್ಷಿಣ ಸ್ಥಳೀಯ ಸಂಸ್ಥೆಯ ನೇತಾಜಿ ಓಪನ್ ಗ್ರೂಪ್ ಮತ್ತು ಚೇತನ್ ಗೈಡ್ ಗ್ರೂಪ್ ವತಿಯಿಂದ ಮಡಿಕೇರಿಯಲ್ಲಿ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರವನ್ನು ಆಯೋಜಿಸಲಾಗಿತ್ತು. ಶ್ರೀ ಜೆ.ಎಸ್. ವಿಜಯ್ ಸ್ಕೌಟ್ ಮಾಸ್ಟರ್ ಶಿಬಿರದ ನೇತೃತ್ವವನ್ನು ವಹಿಸಿದ್ದರು.



* ಏಪ್ರಿಲ್ 18 ರಿಂದ 25ರ ವರೆಗೆ ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ಗ್ಲೋಬಲ್ ಪಬ್ಲಿಕ್ ಶಾಲೆಯಲ್ಲಿ ಬೇಸಿಗೆ ಶಿಬಿರದ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿತ್ತು. ಉದ್ಘಾಟನೆಯನ್ನು ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು ಗಿಡಕ್ಕೆ ನೀರು ಹಾಕುವುದರ ಮೂಲಕ ನೇರವೇರಿಸಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯರಾದ ಶ್ರೀಮತಿ ಶಾಯಿದ್




ಅಂಜುಮ್, ಸ್ಕೌಟ್ ಮಾಸ್ಟರ್ ಶ್ರೀ ಮುಸ್ತಫ್, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಉಪಸ್ಥಿತರಿದ್ದರು.

* ಮೇ 04 ಡಿ.ಆರ್.ಎಂ. ಪದವಿ ಕಾಲೇಜಿನ ರೋವರ್ಸ್ ರೇಂಜರ್ಸ್‌ಗಳು ಮತದಾನ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು.

* ಏಪ್ರಿಲ್ 15 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆ ಎಸ್.ಎಸ್.ಎಸ್.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ರೋವರ್ಸ್-ರೇಂಜರ್ಸ್‌ಗಳಿಗೆ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರವನ್ನು ಶ್ರೀಮತಿ ಶಾರದಾ ಮಾಗನಹಳ್ಳಿ, ಜಿಲ್ಲಾ ಗೈಡ್ ಆಯುಕ್ತರು ಉದ್ಘಾಟಿಸಿ ರೋವರ್ಸ್ ರೇಂಜರ್ಸ್‌ಗಳ ಬೌದ್ಧಿಕ ಮತ್ತು ಮಾನಸಿಕ ಸಾಮರ್ಥ್ಯದ ಬಗ್ಗೆ ಮಾಹಿತಿ ನೀಡಿದರು. ಕಾರ್ಯಾಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಅಮೃತೇಶ್ವರ ಅವರು ವಹಿಸಿದ್ದರು. ಈ ಸಂದರ್ಭದಲ್ಲಿ ರೋವರ್ ಸ್ಕೌಟ್ ಲೀಡರ್ ಡಾ॥ ಪ್ರಕಾಶ್, ರೇಂಜರ್ ಲೀಡರ್ಸ್‌ಗಳಾದ ಡಾ॥ ಶಕುಂತಲಾ, ಶ್ರೀಮತಿ ಸುಪ್ರಿಯ ಬುಟ್ಟೆ, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಉಪಸ್ಥಿತರಿದ್ದರು.



## ಹಾಸನ

* ಸರ್ಕಾರಿ ಪ್ರೌಢ ಶಾಲೆ ಹಿರಿಸಾವೆಯ ಸ್ಕೌಟ್ಸ್ ಗೈಡ್ಸ್‌ಗಳಿಗೆ ಏಪ್ರಿಲ್ 20 ರಿಂದ 24ರ ವರಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಿ ಸ್ಕೌಟಿಂಗ್ ಗೈಡಿಂಗ್ ಚಟುವಟಿಕೆಯ ಬಗ್ಗೆ ವಾಹಿತಿಯನ್ನು ನೀಡಲಾಯಿತು. ಶ್ರವಣಬೆಳಗೊಳ ಬೆಟ್ಟಕ್ಕೆ ಹೊರಸಂಚಾರವನ್ನು ಹಮ್ಮಿಕೊಂಡು ಐತಿಹಾಸಿಕ



ಸ್ಥಳದ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಈ ಸಂಧರ್ಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಭಾಗವಹಿಸಿದ್ದರು. ಸ್ಕೌಟ್ಸ್ ಗೈಡ್ಸ್‌ಗಳಿಂದ ಸ್ವಚ್ಛತಾ ಕಾರ್ಯವನ್ನು ಮಾಡಿಸಲಾಯಿತು.

* "ಸಾಮಾನ್ಯವಾಗಿ ಅಪಘಾತ, ಅವಘಡಗಳಾದ ಸಂದರ್ಭದಲ್ಲಿ ಪ್ರಾಣಾಪಾಯದಿಂದ ರಕ್ಷಣೆ ನೀಡುವ ಹಿನ್ನೆಲೆಯಲ್ಲಿ ಪ್ರಥಮ ಚಿಕಿತ್ಸೆ ಮಹತ್ತರ ಪಾತ್ರ ವಹಿಸುತ್ತದೆ. ವ್ಯಕ್ತಿ ಗಾಯ ಅಥವಾ ಅವಘಡಗಳಿಗೆ ಸಿಲುಕಿದಾಗ ಒದಗಿಸುವ ಆರಂಭಿಕ ಆರೈಕೆ ಇದಾಗಿದೆ" ಎಂದು ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಎಚ್.ಎಂ. ಪ್ರಿಯಾಂಕ ಅಭಿಪ್ರಾಯಪಟ್ಟರು. ಅವರು ಆಲೂರು ತಾಲ್ಲೂಕು ತಾಳೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾಲ್ಲೂಕು ಸಂಸ್ಥೆ ಹಮ್ಮಿಕೊಂಡಿದ್ದ ಬೇಸಿಗೆ ಶಿಬಿರ ಕಾರ್ಯಾಗಾರದಲ್ಲಿ ಪ್ರಥಮ ಚಿಕಿತ್ಸೆಯ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತ ಡಾ॥ ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಎಚ್.ಜಿ. ಕಾಂಚನಮಾಲ, ಜಿಲ್ಲಾ ಸಹಾಯಕ ಆಯುಕ್ತ ಶ್ರೀ ಎಂ. ಬಾಲಕೃಷ್ಣ, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಸೇರಿದಂತೆ ಸ್ಕೌಟ್ಸ್ ಗೈಡ್ಸ್‌ಗಳು ಹಾಜರಿದ್ದರು.

* "ಮಕ್ಕಳ ಜ್ಞಾನ ಕೇವಲ ಪಠ್ಯಕ್ಕೆ ಸೀಮಿತಗೊಳ್ಳದೇ ಪಠ್ಯೇತರ ಚಟವಟಿಕೆಗಳಲ್ಲಿ ವಿಕಸನಗೊಳ್ಳಬೇಕಿದೆ. ಇದಕ್ಕೆ ಪೂರಕವಾಗಿ ನಿತ್ಯ ಜೀವನದಲ್ಲಿ ಲ್ಯಾಷಿಂಗ್ಸ್ ಅಥವಾ ಸಾಮಾನ್ಯ ಗಂಟುಗಳ ಅವಶ್ಯಕತೆ ತುಂಬಾ ಮಹತ್ವದ್ದಾಗಿದೆ" ಎಂದು ಜಿಲ್ಲಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಶ್ರೀಮತಿ ಎಚ್.ಜಿ. ಕಾಂಚನಮಾಲ ಅಭಿಪ್ರಾಯಪಟ್ಟರು. ಅವರು ಆಲೂರು ತಾಲ್ಲೂಕು ಕಣತೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾಲ್ಲೂಕು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಹಮ್ಮಿಕೊಂಡಿದ್ದ ಬೇಸಿಗೆ ಶಿಬಿರ ಕಾರ್ಯಾಗಾರದಲ್ಲಿ ನಿತ್ಯ ಜೀವನದಲ್ಲಿ ಗಂಟುಗಳ ಮಹತ್ವ ಕುರಿತು ಮಾತನಾಡಿದರು.

* "ಕಥಾ ರಚನೆಯಲ್ಲಿ ಯೋಚನಾ ಲಹರಿಯ ಜೊತೆಗೆ ಏಕಾಗ್ರತೆ, ಸಂಯಮ ಬಹಳ ಮುಖ್ಯ ಈ ಹಿನ್ನೆಲೆಯಲ್ಲಿ ಮಕ್ಕಳು ಗಮನಹರಿಸಬೇಕು" ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಅಭಿಪ್ರಾಯಪಟ್ಟರು. ಅವರು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ(ರಿ.), ಬೆಂಗಳೂರು, ಹಾಸನ ತಾಲ್ಲೂಕು ಘಟಕದ ವತಿಯಿಂದ ಜಿಲ್ಲಾ ಸಂಸ್ಥೆ ಸಹಯೋಗದೊಂದಿಗೆ ಸ್ಕೌಟ್ಸ್, ಗೈಡ್ಸ್ ಸಮುದಾಯಭವನದಲ್ಲಿ ಮಕ್ಕಳಿಗಾಗಿ ಏರ್ಪಡಿಸಿದ್ದ ಉಚಿತ ಕಥಾ ಕಮ್ಮಟದಲ್ಲಿ ಮಾತನಾಡಿದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಎಚ್.ಎಂ. ಪ್ರಿಯಾಂಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್, ಕೇಂದ್ರ ಸಮಿತಿಯ ಜಂಟಿ ಕಾರ್ಯದರ್ಶಿ ಶ್ರೀ ನಾಗರಾಜ್ ದೊಡ್ಡಮನಿ, ಜಿಲ್ಲಾ ಮುಖ್ಯ ಆಯುಕ್ತ ಡಾ॥ ವೈ.ಎಸ್. ವೀರಭದ್ರಪ್ಪ, ತಾಲ್ಲೂಕು ಅಧ್ಯಕ್ಷೆ ಶ್ರೀ ಕೆ.ಸಿ. ಗೀತಾ, ಮಹಿಳಾ ಕಾರ್ಯದರ್ಶಿ ಶ್ರೀಮತಿ ಪದ್ಮಾವತಿ ವೆಂಕಟೇಶ್, ಸಮಾಜ ಸೇವಕಿ ಶ್ರೀಮತಿ ಭಾನುಮತಿ, ಕವಯಿತ್ರಿ ಶ್ರೀಮತಿ ಗಿರಿಜಾ ನಿರ್ವಾಣಿ, ಪೋಷಕ ರಾಮಭದ್ರಯ್ಯ, ಎ.ಎಸ್.ಒ.ಸಿ. ಶ್ರೀಮತಿ ಪ್ರಿಯಾಂಕ ಎಚ್.ಎಂ. ಸೇರಿದಂತೆ ಶಿಬಿರಾರ್ಥಿಗಳು ಹಾಜರಿದ್ದರು.

* "ಅರಣ್ಯ ನಾಶ, ಪರಿಸರ ಮಾಲಿನ್ಯ, ಹವಾಮಾನ ಏರಿಕೆ, ಪ್ರಕೃತಿ ವಿಕೋಪಗಳಂತಹ ಬಹುದೊಡ್ಡ ಸಮಸ್ಯೆಗಳು ದಿನದಿಂದ ದಿನಕ್ಕೆ ತೀವ್ರತೆ ಪಡೆಯುತ್ತಿರುವ ಸಂದರ್ಭದಲ್ಲಿ ವಿಶ್ವ ಭೂ ದಿನಾಚರಣೆ ಬಹಳ ಮಹತ್ವದ್ದಾಗಿದೆ. ಭೂಮಿಯ ಸಂರಕ್ಷಣೆ ಜಗತ್ತಿನ ಅತಿ ತುರ್ತಾಗಿದೆ" ಎಂದು ಸಾಹಿತಿ ಹಾಗೂ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಶ್ರೀ ಕೊಟ್ರೇಶ್ ಎಸ್.ಉಪ್ಪಾರ್ ಅಭಿಪ್ರಾಯಪಟ್ಟರು. ಜಿಲ್ಲಾ ಸಂಸ್ಥೆ ಹಾಸನ ಹಾಗೂ ಏಕಲವ್ಯ ರೋವರ್ ಮುಕ್ತದಳ ಸಂಯುಕ್ತಾಶ್ರಯದಲ್ಲಿ ನಗರದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಭೂ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು. ಜಿಲ್ಲಾ ಮುಖ್ಯ ಆಯುಕ್ತ ಡಾ॥ ವೈ.ಎಸ್. ವೀರಭದ್ರಪ್ಪ ಮಾತನಾಡಿ "ಪರಿಸರ ವ್ಯವಸ್ಥೆಗಳು ನಮಗೆ ಶುದ್ಧ ಗಾಳಿ, ನೀರು, ಮತ್ತು ವೈವಿಧ್ಯಮಯ ಸಸ್ಯ ಹಾಗೂ ಪ್ರಾಣಿಗಳ ಜೀವನಗಳನ್ನು ವ್ಯವಸ್ಥಿತ ರೂಪದಲ್ಲಿ ಕೊಂಡೊಯ್ಯುತ್ತದೆ. ನಮ್ಮಂತೆ ಭೂಮಿಯ ಆರೋಗ್ಯವೂ ಸಹ ಬಹಳ ಮುಖ್ಯ" ಎಂದರು.



* ಏಪ್ರಿಲ್ 26 ರಂದು ಹಾಸನ ಜಿಲ್ಲಾ ಸಂಸ್ಥೆಯಲ್ಲಿ  ನಡೆದ ಚುನಾವಣೆಯ ಮತಗಟ್ಟೆಗಳಲ್ಲಿ, ಎಸ್ ಜಿ ಆರ್ ಶಾಲೆಯ ಸ್ಕೌಟ್ಸ್ ಗೈಡ್ಸ್‌ಗಳು, ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನ ರೇಂಜರ್ಸ್‌ಗಳು, ಬಿ.ಎಂ. ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೊಣನೂರು ರೋವರ್ಸ್‌ಗಳು, ಪೂರ್ಣಚಂದ್ರ ಶಾಲೆಯ ಸ್ಕೌಟ್ಸ್‌ಗಳು ಇನ್ನು ಇತರೆ ವಿದ್ಯಾರ್ಥಿಗಳು ಉತ್ತಮವಾದ ಸೇವೆಯನ್ನು ಸಲ್ಲಿಸಿರುತ್ತಾರೆ.

* ಹಾಸನ ಜಿಲ್ಲಾ ಸಂಸ್ಥೆಯ ವತಿಯಿಂದ ಮಂಗಳೂರು ಪಬ್ಲಿಕ್ ಶಾಲೆಯಲ್ಲಿ ಪ್ರಾರಂಭಿಕ ತರಬೇತಿ ಶಿಬಿರವನ್ನು ಮೇ 14 ರಂದು ಮಾಡಲಾಯಿತು. ಪ್ರಾರಂಭಿಕ ಶಿಬಿರವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ರವರು ಉದ್ಘಾಟನೆ ಮಾಡಿದರು ಸೋಫಿಯಾ ಫರ್ನಾಂಡಿಸ್, ಜಂಟಿಕಾರ್ಯದರ್ಶಿ ಜಿಲ್ಲಾ ಸಂಸ್ಥೆ, ಶ್ರೀಮತಿ ಕಾಂಚನಮಾಲ ಹಿರಿಯ ಗೈಡರ್ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾಹಿತಿಯನ್ನು ನೀಡಿದರು.






## ಕೊಡಗು

* ಕೊಡಗು ಜಿಲ್ಲಾ ಸಂಸ್ಥೆಯ ಪೊನ್ನಂಪೇಟೆ ಸ್ಥಳೀಯ ಸಂಸ್ಥೆಯಡಿ ಬರುವ ಸರ್ವದೈವತ್ವ ವಿದ್ಯಾಸಂಸ್ಥೆಯ ವತಿಯಿಂದ ಮೇ 07 ರಿಂದ 09ರ ವರೆಗೆ ಬೇಸಿಗೆ ಶಿಬಿರವನ್ನು ಆಯೋಜಿಸಲಾಯಿತ್ತು.



## ಕೋಲಾರ

* ಏಪ್ರಿಲ್ 17 ರಿಂದ 20 ರವರೆಗೆ ಬಂಗಾರಪೇಟೆ ತಾಲ್ಲೂಕಿನ ಜೈನ್ ಗ್ಲೋಬಲ್ ಶಾಲೆಯಲ್ಲಿ ಬೇಸಿಗೆ ಶಿಬಿರವು ಶಾಲೆಯ ಸ್ಕೌಟ್ ಮಾಸ್ಟರ್ ಆಂತೋಣಿ ಜಯಕುಮಾರ್‌ರವರ ನಾಯಕತ್ವದಲ್ಲಿ ಜರುಗಿತು.




* ಏಪ್ರಿಲ್ 21 ರಂದು ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಕೋಲಾರ ನಗರ ಸಭೆ ರವರ ಸಂಯುಕ್ತ ಆಶ್ರಯದಲ್ಲಿ ಚುನಾವಣಾ ಜಾಗೃತಿ ಜಾಥಾವನ್ನು ಕೋಲಾರ ನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಹಿರಿಯ ನ್ಯಾಯಾಧೀಶರಾದ ಶ್ರೀಯುತ ಸುನಿಲ ಎಸ್. ಹೊಸಮುನಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಪದ್ಮಾ ಬಸಂತಪ್ಪ, ನಗರಸಭೆ ಆಯುಕ್ತರಾದ ಶ್ರೀಯುತ ಶಿವಾನಂದ, ಸ್ಕೌಟ್ ಆಯುಕ್ತರಾದ ಶ್ರೀಯುತ ಕೆ.ಆರ್. ಸುರೇಶ್, ಜಂಟಿ ಕಾರ್ಯದರ್ಶಿ ಉಮಾದೇವಿ, ಸಹಕಾರ್ಯದರ್ಶಿ ಬಾಬು.ರವರು ಉಪಸ್ಥಿತರಿದ್ದರು.

* ಏಪ್ರಿಲ್ 22 ರಿಂದ 24ರ ವರೆಗೆ ಶ್ರೀನಿವಾಸಪುರ ತಾಲ್ಲೂಕಿನ ವಳಗೇರನಹಳ್ಳಿ ಮತ್ತು ಚಿರುವನಹಳ್ಳಿ ಶಾಲೆಗಳಲ್ಲಿ ಬೇಸಿಗೆ ಶಿಬಿರವನ್ನು ನಡೆಸಲಾಯಿತು.

* ಏಪ್ರಿಲ್ 23 ರಿಂದ 25 ರವರೆಗೆ ಶ್ರೀನಿವಾಸಪುರ ತಾಲ್ಲೂಕಿನ ಜಿ.ಜಿ.ವೇಣು ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. 260 ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು.




* ಏಪ್ರಿಲ್ 24 ರಂದು ಶ್ರೀನಿವಾಸಪುರ ಪಟ್ಟಣದಲ್ಲಿ ಚುನಾವಣಾ ಜಾಗೃತಿ ಜಾಥಾ ಕಾರ್ಯವನ್ನು ಹಮ್ಮಿಕೊಂಡು ಪಟ್ಟಣದ ಪ್ರಮುಖ ಬೀಧಿಗಳಲ್ಲಿ ಜನರಿಗೆ ಕಡ್ಡಾಯವಾಗಿ ಮತದಾನ ಮಾಡಿ ಎಂದು ಸಂದೇಶ ನೀಡಲಾಯಿತು. ಈ ಕಾರ್ಯಕ್ಕೆ ತಾಲ್ಲೂಕು ಪಂಚಾಯತ್ ನಿರ್ವಹಣಾಧಿಕಾರಿಯಾದ ಶ್ರೀಯುತ ರವಿ, ವೇಣು ಶಾಲೆಯ ಕಾರ್ಯದರ್ಶಿ ಮಣಿಕಂಠರವರು ಚಾಲನೆ ನೀಡಿದರು. ಸ್ಕೌಟ್ ಗೈಡ್‌ಗಳು ಭಾಗವಹಿಸಿದ್ದರು.



* ಏಪ್ರಿಲ್ 24 ರಿಂದ 26ರ ವರೆಗೆ ಸಾಧಕ್ ನ್ಯಾಷನಲ್ ಶಾಲೆ ಬಂಗಾರಪೇಟೆಯಲ್ಲಿ ಬೇಸಿಗೆ ಶಿಬಿರಕ್ಕೆ ಶಾಲಾ ಆಡಳಿತಾದಿಕಾರಿಯಾದ ಶ್ರೀಯುತ ವಿಕ್ರಮ್ ರವರು ಚಾಲನೆ ನೀಡಿ ಶುಭಕೋರಿದರು. ಈ ಶಿಬಿರದಲ್ಲಿ ತರಬೇತಿ ನಾಯಕರಾದ ಶ್ರೀ ನಂಜುಂಡಪ್ಪ, ಶ್ರೀಮತಿ ಹೇಮಾವತಿರವರು ಸೇವೆ ಸಲ್ಲಿಸಿದರು.

* ಏಪ್ರಿಲ್ 28 ರಿಂದ 30 ರವರೆಗೆ ಕೆ.ಪಿ.ಎಸ್. ಬೂದಿಕೋಟೆ ಶಾಲೆಯಲ್ಲಿ ಗೈಡ್ ಕ್ಯಾಪ್ಟನ್ ಶ್ರೀಮತಿ ಉಮಾರವರ ನಾಯಕತ್ವದಲ್ಲಿ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು.

* ಏಪ್ರಿಲ್ 20 ರಿಂದ ಮೇ 10 ರವರೆಗೆ ಕೋಲಾರ ನಗರದ ನ್ಯೂ ಲಿಟಲ್ ಸ್ಟಾರ್ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಜಿಲ್ಲಾ ಸ್ಕೌಟ್ಸ್ ಗೈಡ್ಸ್ ನೋಡಲ್ ಅಧಿಕಾರಿಗಳಾದ ಶ್ರೀಯುತ ಸಿ.ಆರ್.ಅಶೋಕ್ ರವರು ಉದ್ಘಾಟಿಸಿ ಶುಭಕೋರಿದರು. ಈ ಸಂದರ್ಭದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಗೌರಾಬಾಯಿ ಮುಂತಾದವರು ಉಪಸ್ಥಿತರಿದ್ದರು.




* ಮೇ 13 ರಂದು ರೋಟರಿ ಸಂಸ್ಥೆವತಿಯಿಂದ ಕೋಲಾರ ಜಿಲ್ಲಾ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯಲ್ಲಿ 45 ವರ್ಷಗಳಿಂದ ಸುದೀರ್ಘವಾಗಿ ಸೇವೆ ಸಲ್ಲಿಸುತ್ತಿರುವ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್‌ರವರನ್ನು ಸನ್ಮಾನ ಮಾಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ರೋಟರಿ ರಾಜ್ಯಪಾಲಕರಾದ ಶ್ರೀಯುತ ರೋ. ಉದಯ ಭಾಸ್ಕರ್, ರೋಟರಿ ಜಿಲ್ಲಾ ಕಾರ್ಯದರ್ಶಿ ಶ್ರೀಯುತ ರೋ.ಗುರು ನಾಗೇಶ್ ಮತ್ತು ರೋಟರಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಮೇ 14 ರಿಂದ 16 ರವರೆಗೆ ಮಾಲೂರು ತಾಲ್ಲೂಕಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಗೊಲ್ಲಹಳ್ಳಿ ಶಾಲೆಯಲ್ಲಿ ಕಬ್ ಮಾಸ್ಟರ್ ಶ್ರೀ ಕೆ.ಎಂ. ರಾಜಪ್ಪ ರವರ ನಾಯಕತ್ವದಲ್ಲಿ ಬೇಸಿಗೆ ಶಿಬಿರ ಯಶಸ್ವಿಯಾಗಿ ನಡೆಸಲಾಯಿತು.

## ಮಧುಗಿರಿ

* ಏಪ್ರಿಲ್ 26, 2024 ರಂದು ಲೋಕಸಭಾ ಚುನಾವಣಾ ಮತ ಗಟ್ಟೆಗಳಲ್ಲಿ ಮಧುಗಿರಿ ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ರೋವರ್ಸ್ ರೇಂಜರ್ಸ್ ಹಾಗೂ ಸ್ಕೌಟ್ಸ್ ಗೈಡ್ಸ್‌ಗಳು ಮತ್ತು ಶಿಕ್ಷಕರು ಉಪನ್ಯಾಸಕರು ಸ್ಥಳೀಯ ಮಟ್ಟದಲ್ಲಿ ಹಾಗೂ ನಗರದಲ್ಲಿ ಸೇವೆ ಸಲ್ಲಿಸಿದರು.



## ಮೈಸೂರು

* 23 ರಿಂದ 25 ಮೇ 2024ರ ವರೆಗೆ ಮೈಸೂರಿನ ಬೇಡನ್ ಪೋವೆಲ್ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಕಾರ್ಯದರ್ಶಿ ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಖಜಾಂಚಿ ಡಾ॥ ಕೆ.ಬಿ. ಗುರುಮೂರ್ತಿಯವರು ಶಿಬಿರವನ್ನು ಉದ್ಘಾಟಿಸಿದರು. ಶಾಲೆಯ ಎಲ್ಲಾ 850 ಕಬ್ಸ್-ಬುಲ್‌ಬುಲ್ಸ್. ಸ್ಕೌಟ್ಸ್-ಗೈಡ್ಸ್, ಸ್ಕೌಟರ್ಸ್-ಗೈಡರ್ಸ್‌ಗಳು ಈ ಶಿಬಿರದಲ್ಲಿ ಭಾಗವಗಿಸಿದ್ದರು. ಪ್ರಾಂಶುಪಾಲರಾದ ಶ್ರೀ ರಾಧಾಕೃಷ್ಣ ಜಿಲ್ಲಾ ಸಂಘಟಕರಾದ ಶ್ರೀ ರಾಮ್ ಪ್ರಸಾದ್, ಶ್ರೀ ಆರ್.ಪಿ. ಚಂದ್ರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.




## ರಾಮನಗರ

* ಮೇ 24 ರಿಂದ 26ರವರೆಗೆ ಸ್ಕೌಟ್ಸ್ ಮತ್ತು ಗೈಡ್ಸ್ ಬೇಸಿಗೆ ಶಿಬಿರವನ್ನು ಹಾರೋಹಳ್ಳಿ ಗ್ರೀನ್ ಬೆಲ್ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಶಿವನಂಜಪ್ಪ ರವರು ಬೇಸಿಗೆ ಶಿಬಿರವನ್ನು ಉದ್ಘಾಟಿಸಿದರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಉಮಾದೇವಿ, ಸ್ಕೌಟ್ ಮಾಸ್ಟರ್ ಶ್ರೀಕಾಂತ್ ಹಾಗೂ ಗೈಡ್ ಕ್ಯಾಪ್ಟನ್ ಶ್ರೀಮತಿ ಶಿಲ್ಪ ಇವರುಗಳು ಉಪಸ್ಥಿತರಿದ್ದರು.



## ರಾಯಚೂರು

* ಏಪ್ರಿಲ್ 17 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ/ಮಸ್ಕಿ ವತಿಯಿಂದ ಮತದಾನ ಜಾಗೃತಿ ಅಭಿಯಾನ ಜಾಥಾವನ್ನು ಸರ್ಕಾರಿ ಪ್ರಾಥಮಿಕ ಶಾಲೆ ವಟಗಲ್‌ನಲ್ಲಿ ಆಯೋಜಿಸಲಾತ್ತು. ಊರಿನ ಹಿರಿಯರಿಗೆ, ಮಹಿಳಿಯರಿಗೆ, ಯುವಕ, ಯುವತಿಯರಿಗೆ ಮತದಾನದ ಜಾಗೃತಿ ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯಿನಿ ಮತ್ತು ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಪುಷ್ಪ, ಶ್ರೀ ಹನುಮೇಶ, ಸ್ಕೌಟ್ಸ್ ಮಾಸ್ಟರ್, ಕವಿತಾಳ ಪೋಲೀಸ್ ಠಾಣೆ ಸಿಬ್ಬಂದಿ ಹಾಗೂ ಗ್ರಾಮದ ನಾಗರಿಕರು ಸಹಕಾರ ನೀಡಿದರು.




* ಮೇ 06 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಎಲ್.ವಿ.ಡಿ ಕಾಲೇಜು, ರಾಯಚೂರು ಇಲ್ಲಿ ಲೋಕ ಸಭಾ ಚುನಾವಣೆಯ ಮಸ್ಟರಿಂಗ್ ಕಾರ್ಯದಲ್ಲಿ ಸ್ವಯಂಸೇವಕರಾಗಿ ರೋವರ್ಸ್ ಮತ್ತು ರೇಂಜರ್ಸ್ ಹಾಗೂ ಪದಾಧಿಕಾರಿಗಳು ಸೇವೆಯನ್ನು ಸಲ್ಲಿಸಿದರು.



* ಮೇ 07 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಎಲ್ಲಾ ಸ್ಥಳೀಯ ಸಂಸ್ಥೆಗಳ ವತಿಯಿಂದ ಲೋಕಸಭಾ ಚುನಾವಣೆ ಮತಗಟ್ಟೆಗಳಲ್ಲಿ ವಿವಿಧ ಶಾಲಾ-ಕಾಲೇಜುಗಳ ಸ್ಕೌಟ್ಸ್ ಗೈಡ್ಸ್ ಹಾಗೂ ರೋವರ್ಸ್ ರೇಂಜರ್ಸ್ ಮತ್ತು ದಳನಾಯಕರು ಸ್ವಯಂ ಸೇವಕರಾಗಿ ಸೇವೆಯನ್ನು ಸಲ್ಲಿಸಿದರು.



* ಜಿಲ್ಲೆಯ ವಿವಿಧ ಶಾಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದುಕೊಂಡಿರುತ್ತಾರೆ.

## ಶಿವಮೊಗ್ಗ

* ಶಿವಮೊಗ್ಗ ಜಿಲ್ಲಾ ಸಂಸ್ಥೆಯ ನೂತನ ಜಿಲ್ಲಾ ಮುಖ್ಯ ಆಯುಕ್ತರಾಗಿ ನೇಮಕ ಗೊಂಡಿರುವ ಶ್ರೀ ಕೆ.ಪಿ. ಬಿಂದುಕುಮಾರ್‌ರವರು ಜಿಲ್ಲಾ ಸಂಸ್ಥೆಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಯವರಾದ ಶ್ರೀ ಗುರುದತ್ತ ಹೆಗಡೆರವರನ್ನು ಬೇಟಿ ಮಾಡಿ ಮುಂದೆ ತಮ್ಮ ಸಹಾಯ ಸಹಕಾರ ಬೇಕು ಎಂದು ಹೂಗುಚ್ಛ ನೀಡಿ ಮನವಿ ಮಾಡಿಕೊಂಡರು. ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರ್, ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪ, ಹಿರಿಯ ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಭಾರತಿ ಡಾಯಸ್ ರವರು ಉಪಸ್ಥಿತರಿದ್ದರು.



## ವಿಜಯಪುರ

ಏಪ್ರಿಲ್ 4 ಮತ್ತು 5 ರಂದು ಸ॥ ಮಾ॥ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆ ಹಾಗೂ ಬಾಲಕರ ಪ್ರಾಥಮಿಕ ಶಾಲೆ ಉಕ್ಕಲಿ ಇಲ್ಲಿ ಬೇಸಿಗೆ ಶಿಬಿರ ಏರ್ಪಡಿಸಲಾಗಿತ್ತು. ಶಿಬಿರವನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಟಿ.ಎನ್. ದಳವಾಯಿ, ಮತ್ತು ಶ್ರೀ ಸಿ.ಜಿ. ಹಿರೇಮಠರವರು ಉದ್ಘಾಟಿಸಿದರು. ಜಿಲ್ಲಾಸಂಸ್ಥೆಯಿಂದ ಎಸ್.ಜಿ.ವಿ. ಶ್ರೀ ರಾಜಶೇಖರ ಖೇಡಗಿರವರು ಆಗಮಿಸಿ ಮಕ್ಕಳನ್ನು ಚಟುವಟಿಕೆಗಳಲ್ಲಿ ತೊಡಗಿಸಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ಆರ್.ಎಸ್. ಸುಕ್ಯಾನ ಸ್ಕೌಟ್ ಮಾಸ್ಟರ್ ಶ್ರೀ ಎಮ್.ಸಿ. ಬಿರಾದಾರ ನೇತೃತ್ವದಲ್ಲಿ ಶಿಬಿರವು ಯಶಸ್ವಿಯಾಗಿ ನಡೆಯಿತು.

* ಏಪ್ರಿಲ್ 23 ರಂದು ವಿಜಯಪುರ ನಗರದ ಸಂತ ಜೋಸೆಫ್ ಆಂಗ್ಲ ಮಾಧ್ಯಮ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕದ ಮಕ್ಕಳಿಂದ ವಿಜಯಪುರ ನಗರದ ಗಣೇಶ ನಗರ ಹಾಗೂ ವಜ್ರಹನುಮಾನ ಗೇಟ್ ಪ್ರದೇಶದಲ್ಲಿ ಸೈಕಲ್ ಜಾಥಾ ಮೂಲಕ ಮತದಾನ ಜಾಗೃತಿ ಮೂಡಿಲಾಯಿತು. ಜಿಲ್ಲಾ ತರಬೇತಿ ಆಯುಕ್ತರು(ಸ್ಕೌ) ಶ್ರೀ ಎಸ್ ಎಸ್ ಬೊಮ್ಮನಹಳ್ಳಿ ಯವರ ಮಾರ್ಗದರ್ಶನದಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ಅನೀಲ ತೊರವಿ ಯವರ ನೇತೃತ್ವದಲ್ಲಿ ಮತದಾನ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು.



* ಮೇ 07 ರಂದು ನಡೆದ ಲೋಕಸಭೆ ಚುನಾವಣೆಯ ಮತಗಟ್ಟೆ ಕೇಂದ್ರಗಳಲ್ಲಿ ಜಿಲ್ಲೆಯ ಶ್ರೀ ಜಿ.ಪಿ. ಪೋರವಾಲ್ ಕಾಲೇಜು ಸಿಂದಗಿಯ ರೋವರ್ಸ್ ಮತ್ತು ರೇಂಜರ್ಸ್‌ಗಳು ರೋವರ್ ಸ್ಕೌಟ್ ಲೀಡರ್ ಶ್ರೀ ಪ್ರಕಾಶ ತೇಜುರವರ ಮಾರ್ಗದರ್ಶನದಲ್ಲಿ ಸಿಂದಗಿ ತಾಲೂಕಿನ ವಿವಿಧ ಮತಗಟ್ಟೆ ಕೇಂದ್ರಗಳಲ್ಲಿ ವಯೋವೃದ್ಧರಿಗೆ ಮತದಾನ ಮಾಡಲು ಮತ್ತು ಸಾರ್ವಜನಿಕರಿಗೆ ಸೇವೆಯನ್ನು ಒದಗಿಸಿದರು.



* ಮೇ 07 ರಂದು ಜಿಲ್ಲೆಯ ಕೆ.ಜಿ.ಎಮ್.ಪಿ.ಎಸ್ ಮುಳವಾಡ ಶಾಲೆಯ ಗೈಡ್ಸ್, ಗೈಡ್ ಕ್ಯಾಪ್ಟನ್ ಶ್ರೀಮತಿ ಪಾರ್ವತಿ ಎಂ. ಪೂಜಾರಿ ರವರ ಮಾರ್ಗದರ್ಶನದಲ್ಲಿ ಬಸವನಬಾಗೇವಾಡಿ ತಾಲೂಕಿನ ವಿವಿಧ ಮತಗಟ್ಟೆ ಕೇಂದ್ರಗಳಲ್ಲಿ ವಯೋವೃದ್ಧರಿಗೆ ಮತದಾನ ಮಾಡಲು ಮತ್ತು ಸಾರ್ವಜನಿಕರಿಗೆ ದಾಹ ತಣಿಸಲು ನೀರಿನ ಸೇವೆಯನ್ನು ಒದಗಿಸಿದರು.

## ಯಾದಗಿರಿ

* ಸಭಾ ಆಂಗ್ಲ ಮಾಧ್ಯಮ ಶಾಲೆ, ಯಾದಗಿರಿ ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದಲ್ಲಿ ಮಕ್ಕಳಿಗೆ ವಿವಿಧ ಚಟುವಟಿಕೆಗಳನ್ನು ನಡೆಸಲಾಯಿತು.



* ಲೋಕಸಭಾ ಚುನಾವಣೆ-2024 ಹಿನ್ನೆಲೆಯಲ್ಲಿ ಮತದಾನ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಮತದಾರರಲ್ಲಿ ಜಾಗೃತಿ ಮೂಡಿಸಲು ಶಹಾಪುರದಲ್ಲಿ ಮತದಾನ ಜಾಗೃತಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಹಾಪುರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜ್ ಗೋಗಿ ರವರು



ಹಾಗೂ ಸ್ಕೌಟ್ ಮಾಸ್ಟರ್ ಆದ ಶ್ರೀ ಯಂಕಪ್ಪ, ರೋವರ್ಸ್, ರೇಂಜರ್ಸ್, ಸ್ಕೌಟ್ಸ್, ಗೈಡ್ಸ್‌ಗಳು ಉಪಸ್ಥಿತರಿದ್ದರು.

* ಏಪ್ರಿಲ್, 22ರಂದು ಚುನಾವಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ನಗರಸಭೆ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಲೋಕಸಭಾ ಚುನಾವಣೆ–2024 ಹಿನ್ನೆಲೆಯಲ್ಲಿ ಮತದಾನ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಮತದಾರರಲ್ಲಿ ಜಾಗೃತಿ ಮೂಡಿಸಲು ನಗರದ ಹೊಸ ಬಸ್ ಸ್ಟ್ಯಾಂಡ್ ಹತ್ತಿರದ ಚಿರಂಜೀವಿ ಮೆಥೊಡಿಸ್ಟ್ ಪ್ರೌಢ ಶಾಲೆಯ ಮುಂಭಾಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಎಚ್.ಟಿ. ಮಂಜುನಾಥ, ಯಾದಗಿರಿ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ರಾಘವೇಂದ್ರ ಅಳ್ಳಳ್ಳಿ ಹಾಗೂ




ಸ್ಕೌಟ್ಸ್, ಗೈಡ್ಸ್ ಸಹಾಯಕ ಶ್ರೀ ಮಹಮ್ಮದ್ ಶಫುದ್ದೀನ್, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ವಿವಿಧ ಇಲಾಖೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಶ್ರದ್ಧಾಂಜಲಿ



**ಶ್ರೀ ಶರಫ್ ಮಾದಪ್ಪ**, ಜಿಲ್ಲಾ ಆಯುಕ್ತರು (ಸ್ಕೌಟ್ಸ್) ಚಾಮರಾಜನಗರ ಜಿಲ್ಲೆ ಇವರು 22 ಮೇ 2024 ರಂದು ಕೊಳ್ಳೇಗಾಲದಲ್ಲಿ ನಿಧನಹೊಂದಿದರು. ಇವರಿಗೆ 78 ವರ್ಷ ವಯಸ್ಸಾಗಿತ್ತು.

ಶ್ರೀಯುತರು ಸ್ಕೌಟ್ ವಿಭಾಗದಲ್ಲಿ ಎಲ್.ಟಿ ತರಬೇತಿಯನ್ನು ಪಡೆದಿದ್ದು ಹಿರಿಯ ನಾಯಕರಾಗಿದ್ದರು. ಹಲವಾರು ವರ್ಷಗಳ ಕಾಲ ಕೊಳ್ಳೆಗಾಲ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಯಾಗಿ, ನಂತರ ಜಿಲ್ಲಾ ಸ್ಕೌಟ್ಸ್ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದರು. ಅಲ್ಲದೆ ರಾಜ್ಯ ಸಂಸ್ಥೆಯಲ್ಲಿ ರಾಜ್ಯ ಪರಿಷತ್‌ನಿಂದ ಆಯ್ಕೆ ಆಗಿ ಹಣಕಾಸು ಸಮಿತಿ ಸದಸ್ಯರಾಗಿದ್ದರು. ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ನಡೆಯುತ್ತಿದ್ದ ತರಬೇತಿ ಹಾಗೂ ಶಿಬಿರಗಳಲ್ಲಿ ಉಪನಾಯಕರಾಗಿ, ನಾಯಕರಾಗಿ ಸಕ್ರಿಯವಾಗಿ ಭಾಗವಹಿಸಿ ಕರ್ತವ್ಯ ನಿರ್ವಹಿಸುತ್ತಿದ್ದರು. ಜಿಲ್ಲಾ ಸಂಸ್ಥೆಯ ಪ್ರಗತಿಗೆ ಸಂಪೂರ್ಣ ಸಹಾಯ ಸಹಕಾರ ನೀಡುತ್ತಿದ್ದರು.

ಇವರು ರಾಜ್ಯ ಸಂಸ್ಥೆಯಿಂದ VETERAN SCOUTER ಮತ್ತು BAR TO MEDEAL OF MERRIT ಪ್ರಶಸ್ತಿಗಳನ್ನು ಪಡೆದಿದ್ದರು. ಹಲವಾರು ಸಂಘ ಸಂಸ್ಥೆಗಳಲ್ಲಿ ಸಮಾಜ ಸೇವೆಯನ್ನು ಮಾಡುತ್ತಿದ್ದು ಸನ್ಮಾನಕ್ಕೆ ಪಾತ್ರರಾಗಿದ್ದರು. ಇವರು ತಮ್ಮ ಧರ್ಮಪತ್ನಿ ಹಾಗೂ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಹಾಗೂ ಬಂಧು–ಮಿತ್ರರನ್ನು ಅಗಲಿದ್ದಾರೆ.

ಶ್ರೀಯುತರ ಅಂತಿಮ ಸಂಸ್ಕಾರದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು, ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ರಾಮಚಂದ್ರ ಹಾಗೂ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿ ಅವರ ಕುಟುಂಬದವರಿಗೆ ಸಂತಾಪ ಹೇಳಿದರು.

# ಶ್ರದ್ಧಾಂಜಲಿ



**ಶ್ರೀಮತಿ ಸುಜಾತ ಕೆ,** ಲೇಡಿ ಕಬ್ ಮಾಸ್ಟರ್, ಸೇಕ್ರಡ್ ಹಾರ್ಟ್ ಆಂಗ್ಲ ಮಾಧ್ಯಮ ಶಾಲೆ, ಮಡಂತ್ಯಾರು, ದಕ್ಷಿಣ ಕನ್ನಡ ಜಿಲ್ಲೆ ಇವರು 01 ಮೇ 2024 ರಂದು ನಿಧನರಾದರು. ಇವರಿಗೆ 39ವರ್ಷ ವಯಸ್ಸಾಗಿತ್ತು. ಇವರು ತಮ್ಮ ಶಾಲೆಯ ಮಕ್ಕಳಿಗೆ ಹಾಗೂ ಶಿಕ್ಷಕರುಗಳಿಗೆ ಅಚ್ಚು ಮೆಚ್ಚಿನ ಶಿಕ್ಷಕಿಯಾಗಿದ್ದು ಸಹೋದ್ಯೋಗಿಗಳಿಗೆ ಪ್ರೀತಿ ಪಾತ್ರರಾಗಿದ್ದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ/ ಜಿಲ್ಲಾ ಸಂಸ್ಥೆಗಳ ಆದರ್ಶ ಶಿಕ್ಷಕಿಯಾಗಿದ್ದರು. ಇವರು ರಾಜ್ಯ / ಜಿಲ್ಲೆ ಹಾಗೂ ಸ್ಥಳೀಯ ಸಂಸ್ಥೆಗಳಿಂದ ನಡೆಯುತ್ತಿದ್ದ ತರಬೇತಿ / ಶಿಬಿರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.



**Mrs. Eva T. Lucas** (87 Years) Former Teacher, Mitralaya Girls High School, Bengaluru W/o Mr. T.S Lucas, Former State Secretary, Former State Commissioner(S) & Former Vice President of Bharat Scouts and Guides, Karnataka Passed Away on 27th May 2024 at Bengaluru. She Leaves Behind her Husband, Son, Daughter & Grand Children & Relatives. May Her Soul Rest in Peace.



ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಪಾಣೆ ಮಂಗಳೂರು ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿ **ಶ್ರೀ ಎನ್. ಶ್ರೀನಿವಾಸ್ ಕುಡ್ವ ರವರು** ದಿನಾಂಕ 05 ಮೇ 2024 ರಂದು ನಿಧನರಾದರು.




ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ನಿವೃತ್ತ ಮುಖ್ಯ ಶಿಕ್ಷಕ ಹಾಗೂ ಸ್ಕೌಟ್ಸ್ ಮಾಸ್ಟರ್ **ಶ್ರೀ ಅಶೋಕ್ ರಾವ್ ರವರು** ದಿನಾಂಕ 10 ಮೇ 2024 ರಂದು ತಮ್ಮ ಸ್ವಗೃಹದಲ್ಲಿ ನಿಧನಹೊಂದಿದ್ದರು. ಇವರಿಗೆ 69 ವರ್ಷ ವಯಸ್ಸಾಗಿತ್ತು. ಇವರು ಸ್ಕೌಟ್ಸ್ ವಿಭಾಗದಲ್ಲಿ ಹಿಮಾಲಯ ವೃಕ್ಷಮಣಿ ತರಬೇತಿ ಪಡೆದಿದ್ದು ಹಲವಾರು ವರ್ಷಗಳಿಂದ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದರು.



ಬೆಳಗಾವಿ ಜಿಲ್ಲೆ ಚಿಕ್ಕೋಡಿಯ ಗೈಡ್ ಕ್ಯಾಪ್ಟನ್ ಹಾಗೂ ರಾಜ್ಯ ಪ್ರಕಟನಾ ಸಮಿತಿ ಸದಸ್ಯರಾದ ಶ್ರೀಮತಿ ಮಹಾದೇವಿ ಪಾಟೀಲ್ ರವರ ಪತಿಯವರಾದ **ಶ್ರೀ ಪ್ರವೀಣ್ ಕುಮಾರ್** ರವರು 24 ಮೇ 2024 ರಂದು ಚಿಕ್ಕೋಡಿಯಲ್ಲಿ ನಿಧನರಾದರು. ಇವರಿಗೆ 45ವರ್ಷ ವಯಸ್ಸಾಗಿತ್ತು. ಶ್ರೀಯುತರು ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿರುತ್ತಾರೆ.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

# Rotary Educational Institutions
## Moodubidire D.K

*Comprising*

- Rotary English Medium School
- Rotary Central School
- Rotary Pre University College

**100% Results**






**Education at it's Best**

**100% Scouts/Guides**

**Our Uniqueness:**

- Student Friendly Staff.
- Serene Campuses.
- Pre KG to II PUC – State Syllabus & CBSE Syllabus.
- Free Mid-day Meal Facility.
- Integrated Training for Academics, Sports, Cultural, NCC, Scouts/Guides, Drawing Grade Exams, Olympiad Exams, Hindi Prachara Sabha Exams & Literary Activities.
- Availability of ClassSaathi App for instant Evaluation, SipsNithya App for connectivity.
- Jollyphonics for English Learning.
- Transport Facility in 18 routes.
- 12 different Saturday Activities.
- ATL Lab.

9845852298. 9611103540, 7259910590

## ಮಾರ್ಚ್ 2024 ರಿಂದ ಮೇ 2024ರ ವರೆಗೆ ವಿವಿಧ ಜಿಲ್ಲೆಗಳಲ್ಲಿ ನಡೆದ ಬೇಸಿಗೆ ಶಿಬಿರಗಳ ಚಟುವಟಿಕೆಗಳಲ್ಲಿ ಭಾಗವಹಿಸಿದ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಹಾಗೂ ರೋವರ್ಸ್-ರೇಂಜರ್ಸ್‌ಗಳ ವಿಹಂಗಮ ನೋಟ



ಚಿಕ್ಕಮಗಳೂರು


ಚಿತ್ರದುರ್ಗ


ದಾವಣಗೆರೆ


ಕೊಪ್ಪಳ


ಮೈಸೂರು


ರಾಮನಗರ


ಉಡುಪಿ


ಯಾದಗಿರಿ

RNI No: 13348/1959. Title Code: KARBIL00285. MAG No. MAG(3)/NPP/184/2021-2022
Postal Regd. No. KA/BGGPO/2580/2021-23. Licensed to Post Without Prepayment License
No. PMG/BG/WPP-340/2021-2023. Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 24)




**If not delivered, please return to :**
**THE EDITOR, Karnataka Scout & Guide**
**State Headquarters, Shanthi Gruha**
**#39, Palace Road, Bengaluru - 560 001**
**Ph.: 080-22260017, 22267470**
**e-mail.: info@bsgkarnataka.org**
**shanthigruha@scout.org.in**
**www.bsgkarnataka.org**

Published by: K. Gangappa Gowda, Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Road, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001. Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru 560 026
Editor: K. Gangappa Gowda